ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)

CPI(M)

# ಸಂವಿಧಾನ

ಮತ್ತು ಸಂವಿಧಾನದ ಅಧೀನವಿರುವ

## ನಿಯಮಗಳು

ನಿಬಂಧನೆ –1

## ಹೆಸರು

ಪಕ್ಷದ ಹೆಸರು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಎಂದು ಇರತಕ್ಕದ್ದು.

ನಿಬಂಧನೆ–2

## ಗುರಿ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಭಾರತದ ಕಾರ್ಮಿಕ ವರ್ಗದ ಕ್ರಾಂತಿಕಾರಿ ಮುಂಚೂಣಿಯಾಗಿದೆ. ಕಾರ್ಮಿಕವರ್ಗದ ಸರ್ವಾಧಿಕಾರದ ಪ್ರಭುತ್ವವನ್ನು ಸ್ಥಾಪಿಸುವುದರ ಮೂಲಕ ಸಮಾಜವಾದ ಮತ್ತು ಸಮತಾವಾದವನ್ನು ಸಾಧಿಸುವುದು ಅದರ ಗುರಿಯಾಗಿದೆ. ಪಕ್ಷವು ತನ್ನೆಲ್ಲಾ ಚಟುವಟಿಕೆಗಳಲ್ಲಿ ಮಾರ್ಕ್ಸ್‌ವಾದ–ಲೆನಿನ್ ವಾದದ ತತ್ವ ಮತ್ತು ನೀತಿಗಳಿಂದ ಮಾರ್ಗದರ್ಶನ ಪಡೆಯುತ್ತದೆ. ಆ ತತ್ವವು ದುಡಿಯುವ ಜನರಿಗೆ, ಮನುಷ್ಯನಿಂದ ಮನುಷ್ಯನ ಶೋಷಣೆಯಾಗುವುದನ್ನು ಕೊನೆಗೊಳಿಸಿ ಅವರ ಪೂರ್ಣ ಬಿಡುಗಡೆಗೆ ಸರಿಯಾದ ದಾರಿಯನ್ನು ತೋರಿಸುತ್ತದೆ. ಪಕ್ಷವು ಕಾರ್ಮಿಕ ವರ್ಗದ ಅಂತರರಾಷ್ಟ್ರಿಯತೆಯ ಪತಾಕೆಯನ್ನು ಎತ್ತಿ ಹಿಡಿಯುತ್ತದೆ.

ನಿಬಂಧನೆ–3

## ಬಾವುಟ

ಪಕ್ಷದ ಬಾವುಟವು ಕೆಂಪು ಬಣ್ಣದ್ದಾಗಿದ್ದು ಅಗಲದ ಒಂದೂವರೆಯಷ್ಟು ಉದ್ದವಿರತಕ್ಕದ್ದು. ಬಾವುಟದ ನಡುವೆ ಒಂದಕ್ಕೊಂದು ಅಡ್ಡವಾಗಿರುವ ಸುತ್ತಿಗೆ ಮತ್ತು ಕುಡುಗೋಲು ಬಿಳಿ ಬಣ್ಣದಲ್ಲಿರತಕ್ಕದ್ದು.

ನಿಬಂಧನೆ–4

## ಸದಸ್ಯತ್ವ

1. ಭಾರತದಲ್ಲಿ ವಾಸವಾಗಿರುವ ಹದಿನೆಂಟು ವರ್ಷ ವಯಸ್ಸಾದ ಅಥವಾ ಅದಕ್ಕೂ ಮೇಲ್ಪಟ್ಟು ಪ್ರಾಯದ ಯಾವ ವ್ಯಕ್ತಿಯಾದರೂ ಪಕ್ಷದ ಕಾರ್ಯಕ್ರಮ ಮತ್ತು ಸಂವಿಧಾನವನ್ನು ಒಪ್ಪಿಕೊಂಡು ಪಕ್ಷದ ಯಾವುದಾದರೊಂದು ಘಟಕದಲ್ಲಿ ಕೆಲಸ ಮಾಡಲು ಸಿದ್ದವಿದ್ದು, ಪಕ್ಷದ ಸದಸ್ಯತ್ವ ಶುಲ್ಕವನ್ನು (ವಿಧಿಸಿಲಾದ ವಂತಿಗೆ ಮತ್ತು ಲೆವಿ) ಕ್ರಮಬದ್ದವಾಗಿ ಕೊಟ್ಟು, ಪಕ್ಷದ ತೀರ್ಮಾನಗಳನ್ನು ಕಾರ್ಯಗತಗೊಳಿಸಲು ಒಪ್ಪಿದರೆ, ಪಕ್ಷದ ಸದಸ್ಯತ್ವವನ್ನು ಪಡೆಯಲು ಅರ್ಹನಾಗುತ್ತಾನೆ.

2. (ಅ) ಹೊಸ ಸದಸ್ಯರನ್ನು ಅವರ ವೈಯುಕ್ತಿಕ ಅರ್ಜಿಯನ್ನು ಪಕ್ಷದ ಇಬ್ಬರು ಸದಸ್ಯರ ಶಿಫಾರಸಿನೊಂದಿಗೆ ಪಡೆಯುವುದರ ಮೂಲಕ ಪಕ್ಷಕ್ಕೆ ಸೇರಿಸಿಕೊಳ್ಳಲಾಗುವುದು. ಅರ್ಜಿದಾರನನ್ನು ಶಿಫಾರಸ್ಸು ಮಾಡುವ ಪಕ್ಷದ ಸದಸ್ಯರು, ಸಂಬಂಧಪಟ್ಟ ಪಕ್ಷದ ಘಟಕ ಅಥವಾ ಶಾಖೆಗೆ ಅರ್ಜಿದಾರನ ಬಗೆಗೆ ಸ್ವಂತ ತಿಳುವಳಿಕೆಯಿಂದ ಪೂರ್ಣ ಮಾಹಿತಿಯನ್ನು ಅಗತ್ಯ ಜವಾಬ್ದಾರಿಯಿಂದ ಸಲ್ಲಿಸಬೇಕು. ಪಕ್ಷದ ಶಾಖೆಯ ಅರ್ಜಿದಾರನನ್ನು ಪಕ್ಷಕ್ಕೆ ಸೇರಿಸಿಕೊಳ್ಳಬೇಕಾದರೆ ತನಗಿಂತ ಮೇಲಿನ ಸಮಿತಿಗೆ ಶಿಫಾರಸು ಮಾಡತಕ್ಕದ್ದು. ಮೇಲಿನ ಸಮಿತಿಯು ಎಲ್ಲಾ ಶಿಫಾರಸ್ಸುಗಳ ಮೇಲೆ ತೀರ್ಮಾನವನ್ನು ತೆಗೆದುಕೊಳ್ಳುತ್ತದೆ.

(ಆ) ಪಕ್ಷದ ಶಾಖೆಗಿಂತ ಮೇಲಿನ ಸಮಿತಿಯಿಂದ ಪಕ್ಷದ ಕೇಂದ್ರ ಸಮಿತಿಯ ಮಟ್ಟದವರೆಗೆ ಎಲ್ಲಾ ಸಮಿತಿಗಳೂ ನೇರವಾಗಿ ಪಕ್ಷಕ್ಕೆ ಹೊಸ ಸದಸ್ಯರನ್ನು ಸೇರಿಸಿಕೊಳ್ಳುವ ಅಧಿಕಾರವನ್ನು ಹೊಂದಿರುತ್ತವೆ.

3. (ಅ) ಪಕ್ಷದ ಸದಸ್ಯತ್ವದ ಎಲ್ಲಾ ಅರ್ಜಿಗಳನ್ನೂ ಶಿಫಾರಸು ಮಾಡಿ ಸಲ್ಲಿಸಿರುವ ಒಂದು ತಿಂಗಳೊಳಗಾಗಿ ಸಂಬಂಧಪಟ್ಟ ಸಮಿತಿಯ ಮುಂದೆ ಇಡತಕ್ಕದ್ದು.

(ಆ) ಅರ್ಜಿದಾರನನ್ನು ಪಕ್ಷಕ್ಕೆ ಸೇರಿಸಿಕೊಂಡಲ್ಲಿ, ಅವನನ್ನು ಅಥವಾ ಅವಳನ್ನು, ಹಾಗೆ ಸೇರಿಸಿಕೊಂಡ ತಾರೀಖಿನಿಂದ ಒಂದು ವರ್ಷದವರೆಗೆ ಉಮೇದುವಾರ ಸದಸ್ಯರೆಂದು ಪರಿಗಣಿಸತಕ್ಕದ್ದು.

4. ಬೇರೊಂದು ಪಕ್ಷದ ಸ್ಥಳೀಯ, ಜಿಲ್ಲಾ ಅಥವಾ ರಾಜ್ಯಮಟ್ಟದ ಪ್ರಮುಖ ಸದಸ್ಯರೊಬ್ಬರು ಪಕ್ಷಕ್ಕೆ ಬರಬೇಕಾದರೆ, ಅವರನ್ನು ಪಕ್ಷದ ಸದಸ್ಯತ್ವಕ್ಕೆ ಸೇರಿಸಿಕೊಳ್ಳುವ ಮೊದಲು ಸ್ಥಳೀಯ ಅಥವಾ ಜಿಲ್ಲಾ ಅಥವಾ ರಾಜ್ಯ ಸಮಿತಿಯ ಒಪ್ಪಿಗೆಯ ಜೊತೆಗೆ ಅದಕ್ಕೂ ಮೇಲಿನ ಸಮಿತಿಯ ಅನುಮತಿ ಪಡೆಯುವುದು ಅಗತ್ಯವಾಗಿದೆ. ವಿಶೇಷ ಸಂದರ್ಭಗಳಲ್ಲಿ ಕೇಂದ್ರ ಸಮಿತಿ ಅಥವಾ ರಾಜ್ಯ ಸಮಿತಿ ಅಂತಹ ಸದಸ್ಯರನ್ನು ಪಕ್ಷದ ಪೂರ್ಣ ಸದಸ್ಯರನ್ನಾಗಿ ಸೇರಿಸಿಕೊಳ್ಳಬಹುದಾಗಿದೆ. ಇಂತಹ ಸದಸ್ಯರನ್ನು ರಾಜ್ಯ ಸಮಿತಿಯು ಸೇರಿಸಿಕೊಳ್ಳುವಾಗ ಅದು ಕೇಂದ್ರ ಸಮಿತಿಯಿಂದ ಪೂರ್ವ ಮಂಜೂರಾತಿಯನ್ನು ಪಡೆದುಕೊಳ್ಳಬೇಕು.

5. ಒಮ್ಮೆ ಪಕ್ಷದಿಂದ ವಜಾ ಮಾಡಲಾದ ಸದಸ್ಯರನ್ನು ಮತ್ತೆ ಸೇರಿಸಿಕೊಳ್ಳಬೇಕಾದರೆ, ಅವರನ್ನು ವಜಾ ಮಾಡಿದ್ದನ್ನು ಖಾಯಂಗೊಳಿಸಿದ ಪಕ್ಷದ ಸಮಿತಿ ಅಥವಾ ಅದಕ್ಕೂ ಮೇಲಿನ ಸಮಿತಿಯ ತೀರ್ಮಾನದಿಂದ ಮಾತ್ರ ಸಾಧ್ಯ.

6. ಉಮೇದುವಾರ ಸದಸ್ಯರಿಗೆ, ಚುನಾಯಿಸುವ, ಚುನಾಯಿತರಾಗುವ ಅಥವಾ ಯಾವುದಾದರೂ ನಿರ್ಣಯಕ್ಕೆ ಮತ ನೀಡುವ ಹಕ್ಕುಗಳನ್ನು ಬಿಟ್ಟರೆ ಪೂರ್ಣ ಸದಸ್ಯರಂತೆಯೇ ಎಲ್ಲಾ ಕರ್ತವ್ಯಗಳೂ ಮತ್ತು ಹಕ್ಕುಗಳೂ ಇರುತ್ತವೆ.

7. ಉಮೇದುವಾರ ಸದಸ್ಯರನ್ನು ಶಿಫಾರಸು ಮಾಡುವ ಪಕ್ಷದ ಶಾಖೆಯಾಗಲಿ, ಅಥವಾ ಪಕ್ಷದ ಸಮಿತಿಯಾಗಲಿ, ಅವರಿಗೆ ಪಕ್ಷದ ಕಾರ್ಯಕ್ರಮ, ಸಂವಿಧಾನ ಮತ್ತು ಪಕ್ಷದ ಪ್ರಸಕ್ತ ಧೋರಣೆಗಳ ಬಗ್ಗೆ ಪ್ರಾಥಮಿಕ ಶಿಕ್ಷಣ ನೀಡಲು ವ್ಯವಸ್ಥೆ ಮಾಡಬೇಕು. ಅವರು ಪಕ್ಷದ ಶಾಖೆಯ ಅಥವಾ ಘಟಕದ ಸದಸ್ಯರಾಗಿ ಕಾರ್ಯ ನಿರ್ವಹಿಸುವುದಕ್ಕೆ ಅವಕಾಶ ಮಾಡಿಕೊಟ್ಟು ಅವರ ಬೆಳವಣಿಗೆಯನ್ನು ಗಮನಿಸಬೇಕು.

8. ಉಮೇದುವಾರಿ ಸದಸ್ಯತ್ವದ ಅವಧಿಯ ಕೊನೆಯಲ್ಲಿ ಸಂಬಂಧಪಟ್ಟ ಪಕ್ಷದ ಶಾಖೆ ಅಥವಾ ಸಮಿತಿ ಆ ಉಮೇದುವಾರ ಸದಸ್ಯರಿಗೆ ಪೂರ್ಣ ಸದಸ್ಯತ್ವ ಪಡೆಯಲು ಅರ್ಹತೆ ಇದೆಯೋ ಇಲ್ಲವೋ ಎಂಬುದನ್ನು ಚರ್ಚಿಸಬೇಕು. ಉಮೇದುವಾರ ಸದಸ್ಯ ಅನರ್ಹನೆಂದು ಕಂಡುಬಂದರೆ ಪಕ್ಷದ ಶಾಖೆ ಅಥವಾ ಸಮಿತಿ ಅವರ ಉಮೇದುವಾರಿ ಸದಸ್ಯತ್ವವನ್ನು ರದ್ದುಗೊಳಿಸಬೇಕು. ಪೂರ್ಣ ಸದಸ್ಯತ್ವ ನೀಡಿರುವ ಬಗ್ಗೆ ನಿರಂತರವಾಗಿ ವರದಿಯೊಂದನ್ನು ಪಕ್ಷದ ಶಾಖೆ ಅಥವಾ ಸಮಿತಿ ತನ್ನ ಮೇಲಿನ ಸಮಿತಿಗೆ ಕಳುಹಿಸಬೇಕು.

9. ಮೇಲಿನ ಸಮಿತಿಯು ಆ ವರದಿಯನ್ನು ಪರಿಶೀಲಿಸಿ, ಆ ವರದಿಯನ್ನು ಕೊಟ್ಟಿರುವ ಶಾಖೆ ಅಥವಾ ಸಮಿತಿಯೊಂದಿಗೆ ಸಮಾಲೋಚಿಸಿ, ಅಂತಹ ಯಾವುದೇ ತೀರ್ಮಾನವನ್ನು ಬದಲಾಯಿಸಬಹುದು ಅಥವಾ ತಿದ್ದುಪಡಿ ಮಾಡಬಹುದು. ಉಮೇದುವಾರಿ ಸದಸ್ಯತ್ವವನ್ನು ಮತ್ತು ಪೂರ್ಣ ಸದಸ್ಯತ್ವವನ್ನು ಕೊಡುವುದರ ಮೇಲೆ ಜಿಲ್ಲಾ ಮತ್ತು ರಾಜ್ಯ ಸಮಿತಿಗಳು ಮೇಲ್ವಿಚಾರಣೆಯ ಅಧಿಕಾರವನ್ನು ಹೊಂದಿರುತ್ತವೆ. ಈ ವಿಚಾರದಲ್ಲಿ ಕೆಳಗಿನ ಸಮಿತಿಗಳ ತೀರ್ಮಾನ ಮಾರ್ಪಡಿಸುವ ಅಥವಾ ತಿರಸ್ಕರಿಸುವ ಹಕ್ಕು ಈ ಸಮಿತಿಗಳಿಗಿದೆ.

10. ಪಕ್ಷದ ಸದಸ್ಯ ಅಥವಾ ಸದಸ್ಯೆ ತನ್ನ ಘಟಕ ಅನುಮೋದನೆಯೊಂದಿಗೆ ತನ್ನ ಅರ್ಜಿಯನ್ನು ತನ್ನ ಘಟಕದ ಮೂಲಕ ಅದು ಯಾವ ಮೇಲಿನ ಘಟಕದ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುತ್ತದೋ ಆ ಘಟಕಕ್ಕೆ ಕಳುಹಿಸುವ ಮೂಲಕ ತನ್ನ ಸದಸ್ಯತ್ವವನ್ನು ಒಂದು ಘಟಕದಿಂದ ಇನ್ನೊಂದಕ್ಕೆ ವರ್ಗಾಯಿಸಿಕೊಳ್ಳಬಹುದು.

ನಿಬಂಧನೆ–5

## ಪಕ್ಷದ ಪ್ರತಿಜ್ಞೆ

ಪಕ್ಷವನ್ನು ಸೇರುವ ಪ್ರತಿಯೊಬ್ಬರೂ ಪಕ್ಷದ ಪ್ರತಿಜ್ಞೆಗೆ ಸಹಿ ಹಾಕಬೇಕು.
ಆ ಪ್ರತಿಜ್ಞೆ ಹೀಗಿದೆ:

> "ನಾನು ಪಕ್ಷದ ಧ್ಯೇಯೋದ್ದೇಶಗಳನ್ನು ಒಪ್ಪಿದ್ದೇನೆ. ಪಕ್ಷದ ಸಂವಿಧಾನಕ್ಕೆ ಬದ್ಧನಾಗಿ, ಪಕ್ಷದ ತೀರ್ಮಾನಗಳನ್ನು ನಿಷ್ಠೆಯಿಂದ ಕಾರ್ಯಗತಗೊಳಿಸಲು ಒಪ್ಪಿದ್ದೇನೆ.

ನಾನು ಸಮತಾವಾದದ ಆದರ್ಶಗಳಿಗೆ ತಕ್ಕಂತೆ ಬದುಕಲು ಪ್ರಯತ್ನಿಸುತ್ತೇನೆ. ನನ್ನ ವೈಯಕ್ತಿಕ ಹಿತಗಳಿಗಿಂತ ಪಕ್ಷ ಮತ್ತು ಜನತೆಯ ಹಿತಗಳು ಮುಖ್ಯವೆಂದು ಪರಿಗಣಿಸಿ ನಾನು ಕಾರ್ಮಿಕ ವರ್ಗದ ಮತ್ತು ದುಡಿಯುವ ಜನತೆಯ ಹಾಗೂ ದೇಶದ ಸೇವೆಯನ್ನು ನಿಸ್ವಾರ್ಥವಾಗಿ ಮಾಡುತ್ತೇನೆ".

ನಿಬಂಧನೆ–6

## ಪಕ್ಷದ ಸದಸ್ಯತ್ವ ದಾಖಲೆಗಳು

ಪಕ್ಷದ ಸದಸ್ಯತ್ವದ ಎಲ್ಲಾ ದಾಖಲೆಗಳು ಜಿಲ್ಲಾ ಸಮಿತಿಯ ಮೇಲ್ವಿಚಾರಣೆಯಲ್ಲಿರತಕ್ಕದ್ದು.

ನಿಬಂಧನೆ–7

## ಪಕ್ಷದ ಸದಸ್ಯತ್ವದ ತಪಾಸಣೆ

1. ಪಕ್ಷದ ಸದಸ್ಯರು ಯಾವ ಘಟಕಕ್ಕೆ ಸೇರಿದ್ದಾರೋ ಆ ಘಟಕವು ಪ್ರತಿ ವರ್ಷಕ್ಕೊಮ್ಮೆ ಪಕ್ಷದ ಸದಸ್ಯತ್ವವನ್ನು ತಪಾಸಿಸಬೇಕು. ಯಾವೊಬ್ಬ ಪಕ್ಷದ ಸದಸ್ಯ ಸರಿಯಾದ ಕಾರಣವಿಲ್ಲದೆ ಒಂದು ನಿರಂತರ ಅವಧಿಗೆ ಪಕ್ಷದ ಜೀವನ ಮತ್ತು ಚಟುವಕೆಗಳಲ್ಲಿ ಭಾಗವಹಿಸದೆ ಇದ್ದರೆ ಅಥವಾ ಪಕ್ಷದ ವಂತಿಗೆಯನ್ನು ಕೊಡಲು ತಪ್ಪಿದರೆ ಅವರನ್ನು ಪಕ್ಷದ ಸದಸ್ಯತ್ವದಿಂದ ಕೈಬಿಡಬೇಕು.
2. ಪಕ್ಷದ ಸದಸ್ಯತ್ವದ ತಪಾಸಣಾ ವರದಿಯನ್ನು ಸಂಬಂಧಪಟ್ಟ ಪಕ್ಷದ ಶಾಖೆ ಅಥವಾ ಸಮಿತಿಯು ತನ್ನ ಮೇಲಿನ ಸಮಿತಿಗೆ ದೃಢೀಕರಣ ಹಾಗೂ ದಾಖಲಾತಿಗಾಗಿ ಕಳುಹಿಸಬೇಕು.
3. ಪಕ್ಷದ ಸದಸ್ಯತ್ವದಿಂದ ಕೈಬಿಟ್ಟಿರುವ ತೀರ್ಮಾನ ಕುರಿತು ಮೇಲ್ಮನವಿ ಮಾಡಿಕೊಳ್ಳಲು ಅಧಿಕಾರವಿರುತ್ತದೆ.

ನಿಬಂಧನೆ–8

## ಪಕ್ಷದ ಸದಸ್ಯತ್ವಕ್ಕೆ ರಾಜೀನಾಮೆ

1. ಪಕ್ಷಕ್ಕೆ ರಾಜೀನಾಮೆ ಕೊಡಲು ಬಯಸುವ ಪಕ್ಷದ ಸದಸ್ಯ ತನ್ನ ರಾಜೀನಾಮೆಯನ್ನು ತಾನು ಸೇರಿರುವ ಪಕ್ಷದ ಶಾಖೆಗೆ ಅಥವಾ ಪಕ್ಷದ ಘಟಕಕ್ಕೆ ಕೊಡಬೇಕು. ಸಂಬಂಧಪಟ್ಟ ಘಟಕವು ಅದನ್ನು ಅಂಗೀಕರಿಸಿ, ಅವರ ಹೆಸರನ್ನು ಸದಸ್ಯರ ಪಟ್ಟಿಯಿಂದ ತೆಗೆದು ಹಾಕಲು ತೀರ್ಮಾನಿಸಬಹುದು. ಮತ್ತು ಅದನ್ನು ಮೇಲಿನ ಸಮಿತಿಗೆ ವರದಿ ಮಾಡಬೇಕು. ರಾಜೀನಾಮೆ ರಾಜಕೀಯ ಕಾರಣದಿಂದಾಗಿದ್ದರೆ ಆ ಘಟಕವು ರಾಜೀನಾಮೆಯನ್ನು

ಸ್ವೀಕರಿಸಲು ನಿರಾಕರಿಸಿ ಅವರನ್ನು ಪಕ್ಷದಿಂದ ವಜಾಮಾಡಬಹುದು.

2. ಪಕ್ಷಕ್ಕೆ ರಾಜೀನಾಮೆ ಕೊಡಲು ಇಷ್ಟಪಡುವ ಸದಸ್ಯರ ಮೇಲೆ ಅವರನ್ನು ಪಕ್ಷದಿಂದ ವಜಾಗೊಳಿಸಬಹುದಾದ ಪಕ್ಷದ ಶಿಸ್ತಿನ ಗಂಭೀರ ಉಲ್ಲಂಘನೆಯ ಆರೋಪವಿದ್ದರೆ ಮತ್ತು ಅಂತಹ ಆರೋಪಕ್ಕೆ ಆಧಾರಗಳು ಇದ್ದರೆ ಆ ರಾಜೀನಾಮೆಯನ್ನು ಪಕ್ಷದಿಂದ ವಜಾಗೊಳಿಸಿದ್ದಾಗಿ ಪರಿಗಣಿಸಿ ಕಾರ್ಯಗತಗೊಳಿಸಬಹುದು.

3. ಹೀಗೆ ಪಕ್ಷದಿಂದ ವಜಾಗೊಳಿಸಿದ್ದಾಗಿ ತೀರ್ಮಾನಿಸಿ ಕಾರ್ಯಗತಗೊಳಿಸಲಾದ ರಾಜೀನಾಮೆಯ ಎಲ್ಲಾ ಪ್ರಸಂಗಗಳನ್ನು ಕೂಡಲೇ ಮೇಲಿನ ಸಮಿತಿಗೆ ವರದಿ ಮಾಡತಕ್ಕದ್ದು ಮತ್ತು ಅವು ಆ ಸಮಿತಿಯ ದೃಢೀಕರಣಕ್ಕೆ ಒಳಪಡಬೇಕಾಗುತ್ತವೆ.

ನಿಬಂಧನೆ–9

## ಸದಸ್ಯತ್ವ ಶುಲ್ಕ

1. ಪಕ್ಷದ ಎಲ್ಲಾ ಸದಸ್ಯರು ಮತ್ತು ಉಮೇದುವಾರ ಸದಸ್ಯರು ಪಕ್ಷದ ಸದಸ್ಯತ್ವ ಶುಲ್ಕ ವರ್ಷಕ್ಕೆ ಎರಡು ರೂಪಾಯಿ ಕೊಡಬೇಕು. ಈ ವಾರ್ಷಿಕ ಶುಲ್ಕವನ್ನು ಪಕ್ಷಕ್ಕೆ ಸೇರಿಸಿಕೊಳ್ಳುವಾಗ ಕೊಡಬೇಕು ಮತ್ತು ಪ್ರತಿ ವರ್ಷ ಮಾರ್ಚ್ ತಿಂಗಳ ಕೊನೆಯೊಳಗೆ ಶಾಖೆ ಅಥವಾ ಘಟಕದ ಕಾರ್ಯದರ್ಶಿಗೆ ಆಯಾ ಸದಸ್ಯರು ಕೊಡಬೇಕು. ಅವನು/ಅವಳು ನಿಗದಿತ ಸಮಯದಲ್ಲಿ ಸದಸ್ಯತ್ವ ಶುಲ್ಕವನ್ನು ಕೊಡದಿದ್ದರೆ ಅವರ ಹೆಸರನ್ನು ಪಕ್ಷದ ಪಟ್ಟಿಯಿಂದ ತೆಗೆದುಹಾಕಬೇಕು. ಅಗತ್ಯವೆನಿಸಿದರೆ ಕೇಂದ್ರ ಸಮಿತಿಯು ಈ ಕಾಲಾವಕಾಶವನ್ನು ವಿಸ್ತರಿಸಬಹುದು.

2. ಪಕ್ಷದ ಶಾಖೆಗಳು ಅಥವಾ ಘಟಕಗಳು ಪಕ್ಷದ ಸದಸ್ಯರಿಂದ ವಸೂಲು ಮಾಡಿದ ಶುಲ್ಕಗಳನ್ನು ಸಂಬಂಧಪಟ್ಟ ಪಕ್ಷದ ಸಮಿತಿಗಳ ಮೂಲಕ ಕೇಂದ್ರ ಸಮಿತಿಗೆ ಒಪ್ಪಿಸಲಾಗುವುದು.

ನಿಬಂಧನೆ–10

## ಪಕ್ಷದ ಲೆವಿ

ಕೇಂದ್ರ ಸಮಿತಿಯು ನಿಗದಿಪಡಿಸಿದಂತೆ ಅನುಗುಣವಾಗಿ ಪ್ರತಿಯೊಬ್ಬ ಪಕ್ಷದ ಸದಸ್ಯರೂ ಮಾಸಿಕ ಲೆವಿ ತೆರತಕ್ಕದ್ದು. ಸದಸ್ಯರ ಆದಾಯಗಳು ಋತು ಆಧಾರಿತವಾಗಿದ್ದಲ್ಲಿ ಅಥವಾ ವಾರ್ಷಿಕ ಸ್ವರೂಪದ್ದಾಗಿದ್ದಲ್ಲಿ ಅವರು ಇದೇ ಶೇಕಡವಾರು ಆಧಾರದಲ್ಲಿ ತಮ್ಮ ಲೆವಿಯನ್ನು ಋತುವಿನ ಆರಂಭದಲ್ಲಿ ಇಲ್ಲವೇ ಪ್ರತಿ ಮೂರು ತಿಂಗಳ ಆರಂಭದಲ್ಲಿ ಕೊಡತಕ್ಕದ್ದು. ಲೆವಿ ಕೊಡಲು

ಬಾಕಿಯಾದ ಮೂರು ತಿಂಗಳ ಒಳಗಾಗಿ ಅದನ್ನು ಕೊಡದೆ ಇರುವ ಸದಸ್ಯರ ಹೆಸರನ್ನು ಪಕ್ಷದ ಸದಸ್ಯರ ಪಟ್ಟಿಯಿಂದ ತೆಗೆದುಹಾಕಬೇಕು.

ನಿಬಂಧನೆ–11

## ಪಕ್ಷದ ಸದಸ್ಯರ ಕರ್ತವ್ಯಗಳು

1. ಪಕ್ಷದ ಸದಸ್ಯರ ಕರ್ತವ್ಯಗಳು ಈ ಕೆಳಗಿನಂತಿವೆ:

(ಅ) ತಾವು ಸೇರಿರುವ ಪಕ್ಷದ ಘಟಕದ ಚಟುವಟಿಕೆಯಲ್ಲಿ ನಿರಂತರವಾಗಿ ಪಾಲುಗೊಳ್ಳುವುದು ಮತ್ತು ಪಕ್ಷದ ಧೋರಣೆಗಳನ್ನು, ತೀರ್ಮಾನಗಳನ್ನು ಮತ್ತು ನಿರ್ದೇಶನಗಳನ್ನು ಪ್ರಾಮಾಣಿಕವಾಗಿ ಕಾರ್ಯಗತಗೊಳಿಸುವುದು.

(ಆ) ಮಾರ್ಕ್ಸ್‌ವಾದ–ಲೆನಿನ್‌ವಾದವನ್ನು ಅಧ್ಯಯನ ಮಾಡುವುದು ಮತ್ತು ತಮ್ಮ ತಿಳುವಳಿಕೆಯ ಮಟ್ಟವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುವುದು.

(ಇ) ಪಕ್ಷದ ಪತ್ರಿಕೆಗಳನ್ನು ಮತ್ತು ಪ್ರಕಟಣೆಗಳನ್ನು ಓದುವುದು, ಅವುಗಳಿಗೆ ಬೆಂಬಲ ನೀಡುವುದು ಮತ್ತು ಅವುಗಳನ್ನು ಜನಪ್ರಿಯಗೊಳಿಸುವುದು.

(ಈ) ಪಕ್ಷದ ಸಂವಿಧಾನವನ್ನು ಮತ್ತು ಶಿಸ್ತನ್ನು ಪಾಲಿಸುವುದು, ಕಾರ್ಮಿಕ ವರ್ಗದ ಅಂತರರಾಷ್ಟ್ರೀಯತೆಯ ಮನೋಭಾವದಿಂದ ಮತ್ತು ಸಮತಾವಾದದ ಉದಾತ್ತ ಧ್ಯೇಯಗಳಿಗೆ ತಕ್ಕಂತೆ ನಡೆದುಕೊಳ್ಳುವುದು.

(ಉ) ಸ್ವಂತ ಹಿತಾಸಕ್ತಿಗಳಿಗಿಂತ ಜನತೆಯ ಮತ್ತು ಪಕ್ಷದ ಹಿತಾಸಕ್ತಿಗಳೇ ಮೇಲು ಎಂದು ಪರಿಗಣಿಸುವುದು.

(ಊ) ಜನತೆಯ ಸೇವೆಯನ್ನು ಸಮರ್ಪಣಾಭಾವದಿಂದ ಮಾಡುವುದು ಮತ್ತು ಜನತೆಯೊಂದಿಗೆ ತಮಗಿರುವ ಸಂಬಂಧವನ್ನು ಸದಾ ಬಲಪಡಿಸುವುದಕ್ಕೆ ಶ್ರಮಿಸುವುದು. ಜನತೆಯಿಂದ ಕಲಿಯುವುದು ಮತ್ತು ಅವರ ಅಭಿಪ್ರಾಯಗಳನ್ನು ಮತ್ತು ಬೇಡಿಕೆಗಳನ್ನು ಪಕ್ಷಕ್ಕೆ ವರದಿ ಮಾಡುವುದು, ಪಕ್ಷದ ವಿನಾಯಿತಿ ಇಲ್ಲದಿದ್ದರೆ ಪಕ್ಷದ ಮಾರ್ಗದರ್ಶನದಲ್ಲಿ ಒಂದು ಸಾಮೂಹಿಕ ಸಂಘಟನೆಯಲ್ಲಿ ದುಡಿಯುವುದು.

(ಎ) ಒಬ್ಬರು ಇನ್ನೊಬ್ಬರೊಡನೆ ಸಂಗಾತಿ ಸಂಬಂಧಗಳನ್ನು ಬೆಳೆಸುವುದು ಮತ್ತು ಪಕ್ಷದೊಳಗೆ ಸಹೋದರತೆಯ ಭಾವನೆಯನ್ನು ನಿರಂತರವಾಗಿ ಅಭಿವೃದ್ಧಿ ಪಡಿಸುವುದು.

(ಏ) ಪರಸ್ಪರ ಸಹಾಯ ಮಾಡುವ ಮತ್ತು ವೈಯುಕ್ತಿಕ ಹಾಗೂ ಸಾಮೂಹಿಕ ಕೆಲಸವನ್ನು ಉತ್ತಮಪಡಿಸುವ ದೃಷ್ಟಿಯಿಂದ ವಿಮರ್ಶೆ ಮತ್ತು ಸ್ವವಿಮರ್ಶೆಯ ಕ್ರಮವನ್ನು ಅನುಸರಿಸುವುದು.

(ಐ) ಪಕ್ಷಕ್ಕೆ ಮುಚ್ಚುಮರೆ ಇಲ್ಲದೆ, ಪ್ರಾಮಾಣಿಕವಾಗಿ ಹಾಗೂ ಸತ್ಯತೆಯಿಂದ

ನಡೆದುಕೊಳ್ಳುವುದು, ಪಕ್ಷದ ನಂಬಿಕೆಗೆ ದ್ರೋಹ ಬಗೆಯದಿರುವುದು.

(ಒ) ಪಕ್ಷದ ಐಕ್ಯತೆ ಮತ್ತು ಸೌಹಾರ್ದತೆಯನ್ನು ಕಾಪಾಡುವುದು ಮತ್ತು ಕಾರ್ಮಿಕ ವರ್ಗದ ಹಾಗೂ ದೇಶದ ಶತ್ರುಗಳ ಬಗೆ ಎಚ್ಚರವಾಗಿರುವುದು.

(ಓ) ಪಕ್ಷದ, ಕಾರ್ಮಿಕ ವರ್ಗದ ಮತ್ತು ದೇಶದ ಶತ್ರುಗಳ ದಾಳಿಯಿಂದ ಪಕ್ಷವನ್ನು ರಕ್ಷಿಸುವುದು ಮತ್ತು ಪಕ್ಷದ ಉದ್ದೇಶವನ್ನು ಎತ್ತಿ ಹಿಡಿಯುವುದು.

2. ಪಕ್ಷದ ಸದಸ್ಯರು ಈ ಮೇಲಿನ ಕರ್ತವ್ಯಗಳನ್ನು ನಿರ್ವಹಿಸುವಂತೆ ನೋಡಿಕೊಳ್ಳುವುದು ಹಾಗೂ ಈ ಕರ್ತವ್ಯಗಳನ್ನು ನೆರವೇರಿಸಲು ಅವರಿಗೆ ಸಾಧ್ಯವಿರುವ ಎಲ್ಲಾ ರೀತಿಯ ಸಹಾಯ ಮಾಡುವುದು ಪಕ್ಷದ ಸಂಘಟನೆಯ ಕರ್ತವ್ಯವಾಗಿದೆ.

ನಿಬಂಧನೆ–12

## ಪಕ್ಷದ ಸದಸ್ಯರ ಹಕ್ಕುಗಳು

1. ಪಕ್ಷದ ಸದಸ್ಯರ ಹಕ್ಕುಗಳು ಈ ಕೆಳಗಿನಂತಿವೆ:

(ಅ) ಪಕ್ಷದ ಅಂಗಘಟಕಗಳನ್ನು, ಸಮಿತಿಗಳನ್ನು ಆಯ್ಕೆ ಮಾಡುವುದು ಹಾಗೂ ಅವುಗಳಿಗೆ ಆಯ್ಕೆಯಾಗುವುದು.

(ಆ) ಪಕ್ಷದ ಧೋರಣೆಗಳನ್ನು ಮತ್ತು ತೀರ್ಮಾನಗಳನ್ನು ರೂಪಿಸುವುದಕ್ಕೆ ಅನುಕೂಲವಾಗುವಂತೆ ಚರ್ಚೆಯಲ್ಲಿ ಪಾಲ್ಗೊಳ್ಳುವುದು.

(ಇ) ಪಕ್ಷದಲ್ಲಿ ತನ್ನ ಕೆಲಸಗಳ ಬಗ್ಗೆ ಪ್ರಸ್ತಾವಗಳನ್ನು ಕೊಡುವುದು.

(ಈ) ಪಕ್ಷದ ಸಮಿತಿಗಳ ಮತ್ತು ಪಕ್ಷದ ಕಾರ್ಯಕರ್ತರ ಕುರಿತು ಪಕ್ಷದ ಸಭೆಗಳಲ್ಲಿ ವಿಮರ್ಶಿಸುವುದು.

(ಉ) ತನ್ನ ವಿರುದ್ಧವಾಗಿ ಶಿಸ್ತಿನ ಕ್ರಮ ತೆಗೆದುಕೊಳ್ಳುವ ಬಗ್ಗೆ ತನ್ನ ಪಕ್ಷದ ಘಟಕ ಚರ್ಚಿಸುವಾಗ ಖುದ್ದಾಗಿ ಹಾಜರಿದ್ದು ವಿವರಣೆ ನೀಡುವುದು.

(ಊ) ಪಕ್ಷದ ಯಾವುದೇ ಸದಸ್ಯರಿಗೆ ಪಕ್ಷದ ಸಮಿತಿಯು ಸಂಘಟನೆಯ ಬಗ್ಗೆ ಮಾಡಿದ ಯಾವುದೇ ತೀರ್ಮಾನದ ಬಗ್ಗೆ ಭಿನ್ನಾಭಿಪ್ರಾಯವೇನಾದರೂ ಇದ್ದರೆ ಬರಹದ ಮೂಲಕ ಮೇಲಿನ ಸಮಿತಿಗೆ ತನ್ನ ಅಭಿಪ್ರಾಯವನ್ನು ತಿಳಿಸುವ ಹಕ್ಕಿದೆ. ರಾಜಕೀಯ ಭಿನ್ನಾಭಿಪ್ರಾಯವಿದ್ದಲ್ಲಿ ಕೇಂದ್ರ ಸಮಿತಿ ತನಕ ಮೇಲಿನ ಸಮಿತಿಗೆ ತನ್ನ ಅಭಿಪ್ರಾಯವನ್ನು ತಿಳಿಸುವ ಹಕ್ಕು ಸದಸ್ಯರಿಗಿದೆ. ಇಂಥ ಎಲ್ಲಾ ಸಂದರ್ಭಗಳಲ್ಲೂ ಆ ಸದಸ್ಯರು ಪಕ್ಷದ ನಿರ್ಣಯಗಳನ್ನು ಕಾರ್ಯಗತಗೊಳಿಸಬೇಕು ಹಾಗೂ ತನ್ನ ಬಿನ್ನಾಭಿಪ್ರಾಯಗಳನ್ನು ಕೆಲಸದ ಪರೀಕ್ಷೆಯ ಮೂಲಕ ಮತ್ತು ಸಂಗಾತಿ ಭಾವನೆಯ ಚರ್ಚೆಗಳ ಮೂಲಕ ಬಗೆಹರಿಸಲು ಪ್ರಯತ್ನಿಸಬೇಕು.

(ಎ) ಕೇಂದ್ರ ಸಮಿತಿಯ ತನಕ ಪಕ್ಷದ ಮೇಲಿನ ಯಾವ ಘಟಕಕ್ಕಾದರೂ ಹೇಳಿಕೆ, ಮೇಲ್ಮನವಿ ಅಥವಾ ದೂರು ಕೊಡುವುದು.

2. ಈ ಹಕ್ಕುಗಳು ಗೌರವಿಸಲ್ಪಡುವಂತೆ ನೋಡಿಕೊಳ್ಳುವುದು ಪಕ್ಷದ ಸಂಘಟನೆಗಳ ಮತ್ತು ಕಾರ್ಯನಿರ್ವಾಹಕರ ಕರ್ತವ್ಯವಾಗಿರುತ್ತದೆ.

ನಿಬಂಧನೆ–13

## ಪ್ರಜಾಸತ್ತಾತ್ಮಕ ಕೇಂದ್ರವಾದದ ತತ್ವಗಳು

1. ಪಕ್ಷದ ರಚನೆಯು ಪ್ರಜಾಸತ್ತಾತ್ಮಕ ಕೇಂದ್ರವಾದದ ತತ್ವಗಳನ್ನು ಆಧರಿಸಿದೆ ಮತ್ತು ಅದರ ಆಂತರಿಕ ಜೀವನವು ಈ ತತ್ವಗಳ ಮಾರ್ಗದರ್ಶನದಲ್ಲಿ ನಡೆಯುತ್ತದೆ. ಪ್ರಜಾಸತ್ತಾತ್ಮಕ ಕೇಂದ್ರವಾದವೆಂದರೆ ಪಕ್ಷದ ಆಂತರಿಕ ಪ್ರಜಾಪ್ರಭುತ್ವವನ್ನಾಧರಿಸಿದ ಕೇಂದ್ರಿಕೃತ ನಾಯಕತ್ವ ಮತ್ತು ಕೇಂದ್ರೀಕೃತ ನಾಯಕತ್ವದ ಮಾರ್ಗದರ್ಶನದಲ್ಲಿರುವ ಪ್ರಜಾಪ್ರಭುತ್ವ.

ಪಕ್ಷದ ರಚನೆಯ ಕ್ಷೇತ್ರದಲ್ಲಿ ಪ್ರಜಾಸತ್ತಾತ್ಮಕ ಕೇಂದ್ರವಾದದ ಮಾರ್ಗದರ್ಶಕ ತತ್ವಗಳೆಂದರೆ:–

(ಅ) ಮೇಲಿನಿಂದ ಕೆಳಗಿನವರೆಗೆ ಪಕ್ಷದ ಎಲ್ಲಾ ಅಂಗ ಘಟಕಗಳು ಚುನಾಯಿಸಲ್ಪಡತಕ್ಕದ್ದು.

(ಆ) ಅಲ್ಪಮತದಲ್ಲಿರುವವರು ಬಹುಮತದ ನಿರ್ಣಯಗಳನ್ನು ಕಾರ್ಯಗತಗೊಳಿಸತಕ್ಕದ್ದು. ಪಕ್ಷದ ಕೆಳಗಣ ಘಟಕಗಳು ಪಕ್ಷದ ಮೇಲಿನ ಅಂಗ ಘಟಕಗಳ ನಿರ್ಣಯ ಮತ್ತು ನಿರ್ದೇಶನಗಳನ್ನು ಕಾರ್ಯಗತಗೊಳಿಸತಕ್ಕದ್ದು; ವ್ಯಕ್ತಿಯು ಸಾಮೂಹಿಕ ಇಚ್ಛೆಗೆ ತನ್ನನ್ನು ಅಧೀನಗೊಳಿಸತಕ್ಕದ್ದು. ಪಕ್ಷದ ಎಲ್ಲಾ ಘಟಕಗಳು ಪಕ್ಷದ ಮಹಾಧಿವೇಶನದ ಮತ್ತು ಕೇಂದ್ರ ಸಮಿತಿಯ ತೀರ್ಮಾನಗಳನ್ನು ಮತ್ತು ನಿರ್ದೇಶನಗಳನ್ನು ಜಾರಿ ಮಾಡತಕ್ಕದ್ದು.

(ಇ) ಪಕ್ಷದ ಎಲ್ಲಾ ಸಮಿತಿಗಳು ತಮ್ಮ ಕೆಲಸದ ಬಗ್ಗೆ ಕಾಲಕಾಲಕ್ಕೆ ತಮ್ಮ ಕೆಳಗಿನ ಘಟಕಗಳಿಗೆ ವರದಿ ಮಾಡಬೇಕು ಮತ್ತು ಕೆಳಗಿನ ಎಲ್ಲಾ ಸಮಿತಿಗಳೂ ಇದೇ ರೀತಿ ತಮ್ಮ ಮೇಲಿನ ಸಮಿತಿಗಳಿಗೆ ವರದಿ ಮಾಡಬೇಕು.

(ಈ) ಪಕ್ಷದ ಎಲ್ಲಾ ಸಮತಿಗಳೂ, ಅದರಲ್ಲೂ ಪ್ರಮುಖವಾಗಿರುವ ಪಕ್ಷದ ಸಮಿತಿಗಳು ಪಕ್ಷದ ಕೆಳಘಟಕಗಳ ಮತ್ತು ಪಕ್ಷದ ಸದಸ್ಯವರ್ಗದ ಅಭಿಪ್ರಾಯ ಮತ್ತು ವಿಮರ್ಶೆಗೆ ಸದಾ ಕಿವಿಗೊಡಬೇಕು.

(ಉ) ಪಕ್ಷದ ಎಲ್ಲಾ ಸಮಿತಿಗಳೂ ಸಾಮೂಹಿಕ ತೀರ್ಮಾನಗಳು, ತಪಾಸಣೆ ಮತ್ತು ವೈಯಕ್ತಿಕ ಜವಾಬ್ದಾರಿಯ ನಿಯಮಗಳಿಗೆ ಅನುಗುಣವಾಗಿ ಕಟ್ಟುನಿಟ್ಟಾಗಿ ಕೆಲಸ ಮಾಡಬೇಕು.

(ಊ) ವಿದೇಶಿ ವ್ಯವಹಾರಗಳಿಗೆ ಸಂಬಂಧಿಸಿದ ಪ್ರಶ್ನೆಗಳು, ಅಖಿಲ ಭಾರತ ಸ್ವರೂಪದ ಪ್ರಶ್ನೆಗಳು ಅಥವಾ ಒಂದಕ್ಕಿಂತ ಹೆಚ್ಚು ರಾಜ್ಯಗಳಿಗೆ ಸಂಬಂಧಿಸಿದ ಪ್ರಶ್ನೆಗಳು, ಇಲ್ಲವೇ ಇಡೀ ದೇಶಕ್ಕೆ ಒಂದೇ ರೀತಿಯ ತೀರ್ಮಾನಗಳು ಅಗತ್ಯವೆನಿಸುವ ಎಲ್ಲಾ ಪ್ರಶ್ನೆಗಳನ್ನು ಪಕ್ಷದ ಅಖಿಲ ಭಾರತ ಘಟಕ ತೆಗೆದುಕೊಳ್ಳಬೇಕು. ರಾಜ್ಯ ಅಥವಾ ಜಿಲ್ಲಾ ಸ್ವರೂಪದ ಎಲ್ಲಾ ಪ್ರಶ್ನೆಗಳನ್ನು ಸಾಮಾನ್ಯವಾಗಿ ಪಕ್ಷದ ಆಯಾ ಘಟಕಗಳೇ ನಿರ್ಧರಿಸಬೇಕು. ಆದರೆ ಯಾವುದೇ ಸಂದರ್ಭದಲ್ಲೂ ಅಂತಹ ತೀರ್ಮಾನಗಳು ಪಕ್ಷದ ಮೇಲಿನ ಘಟಕದ ತೀರ್ಮಾನಗಳಿಗೆ ವಿರೋಧವಾಗಿರಬಾರದು. ಕೇಂದ್ರ ಸಮಿತಿಯು ರಾಜ್ಯದ ಪ್ರಮುಖ ವಿಚಾರವೊಂದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳಬೇಕಾದಾಗ, ಅದಕ್ಕೆ ಸಂಬಂಧಪಟ್ಟ ಆ ರಾಜ್ಯದ ಪಕ್ಷದ ಸಂಘಟನೆಯೊಂದಿಗೆ ಸಮಾಲೋಚಿಸಿಯೇ ಸಾಮಾನ್ಯವಾಗಿ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಜಿಲ್ಲೆಗಳಿಗೆ ಸಂಬಂಧಿಸಿದಂತೆ ರಾಜ್ಯ ಸಂಘಟನೆಯು ಇದರಂತೆಯೇ ಮಾಡಬೇಕು.

(ಋ) ಅಖಿಲ ಭಾರತ ಮಟ್ಟದಲ್ಲಿ ಪಕ್ಷದ ಧೋರಣೆಗೆ ಸಂಬಂಧಿಸಿದಂತಹ ಪ್ರಶ್ನೆಗಳಿಗೆ ಪಕ್ಷವು ಮೊದಲ ಬಾರಿಗೆ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕಾಗಿದ್ದಾಗ, ಪಕ್ಷದ ಕೇಂದ್ರೀಯ ನಾಯಕತ್ವವು ಮಾತ್ರ ಧೋರಣಾತ್ಮಕ ಹೇಳಿಕೆಯನ್ನು ಕೊಡುವ ಹಕ್ಕನ್ನು ಪಡೆದಿರುತ್ತದೆ. ಕೆಳಗಿನ ಸಮಿತಿಗಳು ಕೇಂದ್ರೀಯ ನಾಯಕತ್ವದ ಪರ್ಯಾಲೋಚನೆಗೆ ತಮ್ಮ ಅಭಿಪ್ರಾಯಗಳನ್ನೂ, ಸಲಹೆಗಳನ್ನೂ ಸಕಾಲದಲ್ಲಿ ಕಳಿಸಿಕೊಡಬಹುದು, ಕಳಿಸಿಕೊಡಲೂ ಬೇಕು.

2. ಪಕ್ಷದ ಒಟ್ಟು ಸದಸ್ಯರ ಮತ್ತು ಜನತೆಯ ಚಳುವಳಿಯ ಅನುಭವದ ಆಧಾರದ ಮೇಲೆ ಪಕ್ಷದ ಆಂತರಿಕ ಜೀವನದಲ್ಲಿ ಪ್ರಜಾಸತ್ತಾತ್ಮಕ ಕೇಂದ್ರವಾದದ ಈ ಕೆಳಗಿನ ಮಾರ್ಗದರ್ಶಕ ಸೂತ್ರಗಳನ್ನು ಅನ್ವಯಿಸಿಕೊಳ್ಳಲಾಗಿದೆ.

(ಅ) ಪಕ್ಷ ಮತ್ತು ಅದರ ಧೋರಣೆ ಹಾಗೂ ಕೆಲಸದ ಮೇಲೆ ಪರಿಣಾಮ ಬೀರುವ ಎಲ್ಲಾ ಪ್ರಶ್ನೆಗಳ ಮೇಲೂ ಪಕ್ಷದ ಘಟಕದೊಳಗೆ ಮುಕ್ತ ಹಾಗೂ ಮುಚ್ಚುಮರೆಯಿಲ್ಲದ ಚರ್ಚೆಯಾಗಬೇಕು.

(ಆ) ಪಕ್ಷದ ಧೋರಣೆಗಳನ್ನು ಜನಪ್ರಿಯಗೊಳಿಸುವಲ್ಲಿ ಮತ್ತು ಕಾರ್ಯಗತಗೊಳಿಸುವಲ್ಲಿ ಪಕ್ಷದ ಸದಸ್ಯರು ಸಕ್ರಿಯವಾಗಿ ಕೆಲಸ ಮಾಡುವಂತೆ ಮಾಡಲು, ಅವರ ಸೈದ್ಧಾಂತಿಕ ರಾಜಕೀಯ ಮಟ್ಟವನ್ನು ಬೆಳೆಸಲು ಮತ್ತು ಅವರ ಸಾಮಾನ್ಯ ಶಿಕ್ಷಣವನ್ನು ಉತ್ತಮ ಪಡಿಸಲು ನಿರಂತರ ಪ್ರಯತ್ನವನ್ನು ಮಾಡುವ ಮೂಲಕ ಅವರು ಪಕ್ಷದ ಜೀವನ ಮತ್ತು ಕೆಲಸದಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸುವಂತೆ ಮಾಡಬೇಕು.

(ಇ) ಪಕ್ಷದ ಸಮಿತಿಯಲ್ಲಿ ತೀವ್ರವಾದ ಭಿನ್ನಾಭಿಪ್ರಾಯಗಳು ತಲೆದೋರಿದಾಗ

ಒಮ್ಮತಕ್ಕೆ ಬರಲು ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನೂ ಮಾಡಬೇಕು. ಅದು ಸಾಧ್ಯವಾಗದಿದ್ದರೆ, ಪಕ್ಷ ಮತ್ತು ಜನತೆಯ ಚಳುವಳಿಗೆ ಸಂಬಂಧಪಟ್ಟ ತೀರ್ಮಾನದ ತುರ್ತು ಅವಶ್ಯಕತೆ ಇಲ್ಲವೆಂದಾದರೆ, ಮುಂದೆ ಹೆಚ್ಚಿನ ಚರ್ಚೆಯ ಮೂಲಕ ಅದನ್ನು ಬಗೆಹರಿಸಿಕೊಳ್ಳುವ ದೃಷ್ಟಿಯಿಂದ ತೀರ್ಮಾನವನ್ನು ಮುಂದೂಡಬೇಕು.

(ಈ) ಮೇಲಿನಿಂದ ಕೆಳಗಿನವರೆಗೆ ಎಲ್ಲಾ ಮಟ್ಟಗಳಲ್ಲೂ ವಿಮರ್ಶೆ ಮತ್ತು ಸ್ವವಿಮರ್ಶೆಯನ್ನು ವಿಶೇಷವಾಗಿ ಪ್ರೋತ್ಸಾಹಿಸಬೇಕು.

(ಉ) ಪಕ್ಷದ ಎಲ್ಲಾ ಮಟ್ಟಗಳಲ್ಲೂ ಅಧಿಕಾರಶಾಹಿ ಪ್ರವೃತ್ತಿಗಳ ವಿರುದ್ಧ ಖಚಿತವಾದ ಹೋರಾಟವನ್ನು ನಡೆಸಬೇಕು.

(ಊ) ಪಕ್ಷದ ಒಳಗೆ ಯಾವುದೇ ರೀತಿಯ ಗುಂಪುಗಾರಿಕೆಗೆ ಮತ್ತು ಗುಂಪು ಕಟ್ಟುವುದಕ್ಕೆ ಅವಕಾಶವಿರಬಾರದು.

(ಋ) ಭ್ರಾತೃತ್ವದ ಸಂಬಂಧಗಳನ್ನು ಮತ್ತು ಪರಸ್ಪರ ನೆರವಾಗುವ ಪ್ರವೃತ್ತಿಯನ್ನು ಬೆಳೆಸುವ ಮೂಲಕ ಪಕ್ಷದ ಅಂತಃಸ್ಫೂರ್ತಿಯನ್ನು ಬಲಪಡಿಸಬೇಕು. ಸಂಗಾತಿಗಳ ತಪ್ಪುಗಳನ್ನು ಸಹಾನುಭೂತಿಯಿಂದ ತಿದ್ದಬೇಕು. ಅವರು ಮಾಡುವ ತಪ್ಪುಗಳನ್ನೇ ಪ್ರತ್ಯೇಕವಾಗಿ ನೋಡದೆ, ಪಕ್ಷದಲ್ಲಿ ಅವರ ಸೇವೆಯ ದಾಖಲೆಯನ್ನೂ ಲೆಕ್ಕಕ್ಕೆ ತೆಗೆದುಕೊಂಡು ತೀರ್ಮಾನಿಸಬೇಕು.

ನಿಬಂಧನೆ–14

## ಪಕ್ಷದ ಅಖಿಲ ಭಾರತ ಮಹಾಧಿವೇಶನ

1. ಇಡೀ ದೇಶಕ್ಕೆ ಪಕ್ಷದ ಅತ್ಯುನ್ನತ ಅಂಗವೆಂದರೆ ಪಕ್ಷದ ಅಖಿಲ ಭಾರತ ಮಹಾಧಿವೇಶನ.

(ಅ) ಪಕ್ಷದ ಸಾಮಾನ್ಯ ಮಹಾಧಿವೇಶನವನ್ನು ಕೇಂದ್ರ ಸಮಿತಿಯು ಸಾಮಾನ್ಯವಾಗಿ ಮೂರು ವರ್ಷಗಳಿಗೊಮ್ಮೆ ಕರೆಯತಕ್ಕದ್ದು.

(ಆ) ಕೇಂದ್ರ ಸಮಿತಿಗೆ ಅವಶ್ಯಕವೆನಿಸಿದಾಗ ಅಥವಾ ಪಕ್ಷದ ಒಟ್ಟು ಸದಸ್ಯತ್ವದ ಮೂರರಲ್ಲೊಂದು ಭಾಗದಷ್ಟನ್ನಾದರೂ ಪ್ರತಿನಿಧಿಸುವ ಪಕ್ಷದ ಎರಡು ಅಥವಾ ಹೆಚ್ಚು ರಾಜ್ಯ ಸಮಿತಿಗಳು ಕೇಳಿಕೊಂಡಾಗ ಪಕ್ಷದ ವಿಶೇಷ ಮಹಾಧಿವೇಶನವನ್ನು ಕೇಂದ್ರ ಸಮಿತಿ ಕರೆಯತಕ್ಕದ್ದು.

(ಇ) ಪಕ್ಷದ ಸಾಮಾನ್ಯ ಅಥವಾ ವಿಶೇಷ ಮಹಾಧಿವೇಶನದ ದಿನಾಂಕ ಮತ್ತು ಸ್ಥಳವನ್ನು ಇದಕ್ಕಾಗಿಯೇ ಕರೆಯಲಾದ ಕೇಂದ್ರ ಸಮಿತಿ ಸಭೆಯಲ್ಲಿ ತೀರ್ಮಾನಿಸಬೇಕು.

(ಈ) ಪಕ್ಷದ ಸಾಮಾನ್ಯ ಮಹಾಧಿವೇಶನಕ್ಕೆ ರಾಜ್ಯ ಸಮ್ಮೇಳನಗಳಲ್ಲಿ ಆಯ್ಕೆಯಾದವರು, ಅಲ್ಲದೆ ಅಖಿಲ ಭಾರತ ಕೇಂದ್ರದಡಿಯಲ್ಲಿರುವ ಪಕ್ಷದ

ಘಟಕಗಳ ಸಮ್ಮೇಳನಗಳಿಂದ ಆಯ್ಕೆಯಾದವರು ಪ್ರತಿನಿಧಿಗಳಾಗಿರುತ್ತಾರೆ.

(ಉ) ಪಕ್ಷದ ಸಾಮಾನ್ಯ ಮಹಾಧಿವೇಶನಕ್ಕೆ ಪ್ರಾತಿನಿಧ್ಯದ ಆಧಾರವನ್ನು ಮತ್ತು ಪಕ್ಷದ ವಿಶೇಷ ಮಹಾಧಿವೇಶನಕ್ಕೆ ಪ್ರಾತಿನಿಧ್ಯದ ಆಧಾರವನ್ನು ಹಾಗೂ ಪ್ರತಿನಿಧಿಗಳನ್ನು ಚುನಾಯಿಸುವ ವಿಧಾನವನ್ನು, ಕೇಂದ್ರ ಸಮಿತಿಯು, ಪಕ್ಷದ ಒಟ್ಟು ಸದಸ್ಯತ್ವ, ಪಕ್ಷದ ನಾಯಕತ್ವದಲ್ಲಿರುವ ಸಾಮೂಹಿಕ ಚಳುವಳಿಗಳ ಬಲ, ಆಯಾ ರಾಜ್ಯಗಳಲ್ಲಿನ ಪಕ್ಷದ ಬಲವನ್ನು ಆಧಾರವಾಗಿಟ್ಟುಕೊಂಡು ನಿರ್ಧರಿಸುವುದು.

(ಊ) ಪಕ್ಷದ ಸಾಮಾನ್ಯ ಮಹಾಧಿವೇಶನವಾಗಿರಲಿ ಅಥವಾ ವಿಶೇಷ ಮಹಾಧಿವೇಶನವಾಗಿರಲಿ, ಕೇಂದ್ರ ಸಮಿತಿಯ ಸದಸ್ಯರಿಗೆ ಪೂರ್ಣ ಪ್ರತಿನಿಧಿಗಳಾಗಿ ಭಾಗವಹಿಸುವ ಹಕ್ಕಿರುತ್ತದೆ.

2. ಪಕ್ಷದ ಸಾಮಾನ್ಯ ಮಹಾಧಿವೇಶನದ ಕಾರ್ಯಗಳು ಮತ್ತು ಅಧಿಕಾರಗಳು ಈ ರೀತಿ ಇರುತ್ತವೆ;

(ಅ) ಕೇಂದ್ರ ಸಮಿತಿಯ ರಾಜಕೀಯ ಮತ್ತು ಸಂಘಟನಾ ವರದಿಯನ್ನು ಚರ್ಚಿಸಿ ಅದರ ಮೇಲೆ ತೀರ್ಮಾನ ಕೈಗೊಳ್ಳುವುದು.

(ಆ) ಪಕ್ಷದ ಕಾರ್ಯಕ್ರಮ ಮತ್ತು ಸಂವಿಧಾನವನ್ನು ಪರಿಷ್ಕರಿಸುವುದು ಮತ್ತು ಬದಲಾಯಿಸುವುದು.

(ಇ) ಪ್ರಸಕ್ತ ಪರಿಸ್ಥಿತಿಯ ಕುರಿತು ಪಕ್ಷದ ಧೋರಣೆಯನ್ನು ನಿರ್ಧರಿಸುವುದು.

(ಈ) ಗುಪ್ತ ಮತದಾನದ ಮೂಲಕ ಕೇಂದ್ರ ಸಮಿತಿಯನ್ನು ಆಯ್ಕೆ ಮಾಡುವುದು.

3. ಅರ್ಹತಾ ಪರಿಶೀಲನಾ ಸಮಿತಿಯನ್ನು ಆಯ್ಕೆಮಾಡುವುದು. ಈ ಸಮಿತಿಯು ಪ್ರತಿನಿಧಿಗಳ ಅರ್ಹತೆಯ ವಿವರಗಳನ್ನು ಪರಿಶೀಲನೆ ಮಾಡಿ ಮಹಾಧಿವೇಶನಕ್ಕೆ ವರದಿ ಮಾಡುವುದು.

4. ಮಹಾಧಿವೇಶನವು ತನ್ನ ಕಲಾಪಗಳ ನಿರ್ವಹಣೆಗೆ ಒಂದು ಅಧ್ಯಕ್ಷ ಮಂಡಳಿಯನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು.

ನಿಬಂಧನೆ–15

## ಕೇಂದ್ರ ಸಮಿತಿ

1. (ಅ) ಕೇಂದ್ರ ಸಮಿತಿಯನ್ನು ಪಕ್ಷದ ಮಹಾಧಿವೇಶನದಲ್ಲಿ ಆಯ್ಕೆಮಾಡತಕ್ಕದ್ದು. ಸಮಿತಿಯ ಸದಸ್ಯರ ಸಂಖ್ಯೆಯನ್ನು ಪಕ್ಷದ ಮಹಾಧಿವೇಶನದಲ್ಲೇ ನಿರ್ಣಯಿಸಬೇಕು.

(ಆ) ನಿವೃತ್ತಿ ಹೊಂದುವ ಕೇಂದ್ರ ಸಮಿತಿಯು ಮಹಾಧಿವೇಶನಕ್ಕೆ ಉಮೇದುವಾರರ ಒಂದು ಪಟ್ಟಿಯನ್ನು ಮಂಡಿಸಬೇಕು.

(ಇ) ಉಮೇದುವಾರರ ಪಟ್ಟಿಯನ್ನು ತಯಾರಿಸುವಾಗ, ಸಮರ್ಥ ನಾಯಕತ್ವವನ್ನು ರೂಪಿಸುವ ದೃಷ್ಟಿಯಿಂದ, ಜನಸಮುದಾಯಗಳೊಂದಿಗೆ ನಿಕಟ ಸಂಪರ್ಕವುಳ್ಳ, ಕಾರ್ಮಿಕ ವರ್ಗದ ಕ್ರಾಂತಿಕಾರಿ ಕಣ್ಣೋಟದಲ್ಲಿ ದೃಢವಾಗಿರುವ ಹಾಗೂ ಮಾರ್ಕ್ಸ್‌ವಾದ–ಲೆನಿನ್‌ವಾದದಲ್ಲಿ ಶಿಕ್ಷಣ ಪಡೆದವರ ಪಟ್ಟಿಯನ್ನು ತಯಾರಿಸತಕ್ಕದ್ದು.

(ಈ) ಪಟ್ಟಿಯಲ್ಲಿ ಪ್ರಸ್ತಾಪಿಸಿರುವ ಯಾವುದೇ ಹೆಸರಿನ ಬಗ್ಗೆ ಯಾವ ಪ್ರತಿನಿಧಿಯಾದರೂ ಆಕ್ಷೇಪವೆತ್ತಬಹುದು. ಹಾಗೆಯೇ ಯಾವುದೋ ಹೊಸ ಹೆಸರನ್ನು ಅಥವಾ ಹೆಸರುಗಳನ್ನು ಸೂಚಿಸಬಹುದು. ಆದರೆ ಸೂಚಿಸಲ್ಪಟ್ಟ ಸದಸ್ಯನ ಪೂರ್ವಾನುಮತಿ ಅಗತ್ಯ.

(ಉ) ಹೆಸರು ಸೂಚಿಸಲ್ಪಟ್ಟವರಲ್ಲಿ ಯಾರು ಬೇಕಾದರೂ ತನ್ನ ಹೆಸರನ್ನು ಹಿಂದಕ್ಕೆ ಪಡೆಯಲು ಹಕ್ಕಿರತಕ್ಕದ್ದು.

(ಊ) ಸೂಚಿತ ಪಟ್ಟಿಯ ಜೊತೆ ಪ್ರತಿನಿಧಿಗಳು ಸೇರಿಸುವ ಉಮೇದುದಾರರ ಹೆಸರುಗಳನ್ನು ಗುಪ್ತ ಮತದಾನದ ಮೂಲಕ ಏಕಮತ ಹಂಚಿಕೆಯ ವಿಧಾನದಲ್ಲಿ ಮತಕ್ಕೆ ಹಾಕಬೇಕು. ಹೆಚ್ಚುವರಿ ಹೆಸರುಗಳಿಲ್ಲದಿದ್ದಲ್ಲಿ ಪ್ರತಿನಿಧಿಗಳ ಒಪ್ಪಿಗೆಯನ್ನು ಕೈ ಎತ್ತುವ ಮೂಲಕ ಪಡೆಯಲಾಗುವುದು.

2. ಪಕ್ಷದ ಎರಡು ಅಖಿಲ ಭಾರತ ಮಹಾಧಿವೇಶನಗಳ ನಡುವೆ ಕೇಂದ್ರ ಸಮಿತಿಯೇ ಪಕ್ಷದ ಅತ್ಯುನ್ನತ ಅಧಿಕಾರವನ್ನು ಹೊಂದಿರುತ್ತದೆ.

3. ಪಕ್ಷದ ಸಂವಿಧಾನವನ್ನು ಜಾರಿಗೊಳಿಸುವ, ಪಕ್ಷದ ಮಹಾಧಿವೇಶನದಲ್ಲಿ ಸ್ವೀಕರಿಸಲಾದ ರಾಜಕೀಯ ಧೋರಣೆ ಮತ್ತು ನಿರ್ಣಯಗಳನ್ನು ಕಾರ್ಯಗತಗೊಳಿಸುವ ಜವಾಬ್ದಾರಿ ಕೇಂದ್ರ ಸಮಿತಿಯದ್ದಾಗಿರುವುದು.

4. ಕೇಂದ್ರ ಸಮಿತಿಯು ಇಡೀ ಪಕ್ಷವನ್ನು ಪ್ರತಿನಿಧಿಸುವ ಮತ್ತು ಪಕ್ಷದ ಸಮಗ್ರ ಕೆಲಸವನ್ನು ನಿರ್ದೇಶಿಸುವ ಹೊಣೆಯುಳ್ಳದ್ದಾಗಿದೆ. ಪಕ್ಷದ ಮುಂದಿರುವ ಯಾವ ಪ್ರಶ್ನೆಯ ಮೇಲೂ ಪೂರ್ಣ ಅಧಿಕಾರದೊಂದಿಗೆ ತೀರ್ಮಾನಗಳನ್ನು ಕೈಗೊಳ್ಳುವ ಹಕ್ಕು ಕೇಂದ್ರ ಸಮಿತಿಗೆ ಇರತಕ್ಕದ್ದು.

5. ಕೇಂದ್ರ ಸಮಿತಿಯು ತನ್ನ ಸದಸ್ಯರೊಳಗೆ ಪ್ರಧಾನ ಕಾರ್ಯದರ್ಶಿಯೂ ಸೇರಿದಂತೆ ಒಂದು ಪೊಲಿಟ್‌ಬ್ಯೂರೋ (ರಾಜಕೀಯ ಮಂಡಳಿ)ವನ್ನು ಆಯ್ಕೆ ಮಾಡತಕ್ಕದ್ದು. ಪೊಲಿಟ್‌ಬ್ಯೂರೋದಲ್ಲಿ ಎಷ್ಟು ಜನ ಸದಸ್ಯರಿರಬೇಕೆಂಬುದನ್ನು ಕೇಂದ್ರ ಸಮಿತಿಯಲ್ಲಿ ತೀರ್ಮಾನಿಸತಕ್ಕದ್ದು. ಕೇಂದ್ರ ಸಮಿತಿಯ ಎರಡು ಸಭೆಗಳ ನಡುವಿನ ಅವಧಿಯಲ್ಲಿ ಕೇಂದ್ರ ಸಮಿತಿಯ ಕೆಲಸ ಕಾರ್ಯಗಳನ್ನು ಪೊಲಿಟ್‌ಬ್ಯೂರೋ ನಡೆಸಿಕೊಂಡು ಹೋಗುವುದು. ಕೇಂದ್ರ ಸಮಿತಿಯ ಎರಡು ಸಭೆಗಳ ನಡುವಿನ ಅವಧಿಯಲ್ಲಿ ರಾಜಕೀಯ ಮತ್ತು ಸಂಘಟನಾ ತೀರ್ಮಾನಗಳನ್ನು ತೆಗೆದುಕೊಳ್ಳುವ ಹಕ್ಕು ಪೊಲಿಟ್‌ಬ್ಯೂರೋಗೆ ಇದೆ.

5. (ಅ) ಕೇಂದ್ರ ಸಮಿತಿಯು ತನ್ನ ಸದಸ್ಯರಿಂದಲೇ ಒಂದು ಕಾರ್ಯದರ್ಶಿ ಮಂಡಳಿಯನ್ನು ಆಯ್ಕೆಮಾಡಬೇಕು. ಇದರ ಸದಸ್ಯರ ಸಂಖ್ಯೆಯನ್ನು ಕೇಂದ್ರ ಸಮಿತಿ ನಿರ್ಧರಿಸತಕ್ಕದ್ದು. ಕಾರ್ಯದರ್ಶಿ ಮಂಡಳಿಯು ಪೊಲಿಟ್‌ಬ್ಯೂರೋ ಮಾರ್ಗದರ್ಶನದಲ್ಲಿ ಪಕ್ಷದ ಕೇಂದ್ರದ ದೈನಂದಿನ ಕೆಲಸ ಕಾರ್ಯಗಳನ್ನು ನೋಡಿಕೊಳ್ಳಬೇಕು ಮತ್ತು ಕೇಂದ್ರ ಸಮಿತಿಯ ತೀರ್ಮಾನಗಳನ್ನು ಜಾರಿಗೊಳಿಸಲು ಪೊಲಿಟ್‌ಬ್ಯೂರೋಗೆ ಸಹಾಯ ಮಾಡಬೇಕು.

6. ರಾಜ್ಯಸಮಿತಿಗಳ ಕಾರ್ಯದರ್ಶಿಗಳು ಮತ್ತು ಪಕ್ಷದ ರಾಜ್ಯ ಪತ್ರಿಕೆಗಳ ಸಂಪಾದಕರ ಆಯ್ಕೆಗೆ ಕೇಂದ್ರ ಸಮಿತಿಯ ಸಮ್ಮತಿ ಅಗತ್ಯವಾಗಿದೆ.

7. (ಅ) ಕೇಂದ್ರ ಸಮಿತಿಯು ತನ್ನ ಯಾರೇ ಒಬ್ಬ ಸದಸ್ಯನನ್ನು ತೀವ್ರ ಶಿಸ್ತುಭಂಗ, ದುರ್ನಡತೆ, ಪಕ್ಷ ವಿರೋಧಿ ಚಟುವಟಿಕೆಗಳಿಗಾಗಿ ಕೇಂದ್ರ ಸಮಿತಿಯಿಂದ ತೆಗೆದು ಹಾಕಬಹುದು. ಕೇಂದ್ರ ಸಮಿತಿಯ ಸಭೆಯಲ್ಲಿ ಹಾಜರಿರುವ ಸದಸ್ಯರಲ್ಲಿ ಮೂರನೇ ಎರಡು ಭಾಗ ಸದಸ್ಯರು ಇದಕ್ಕೆ ಮತ ನೀಡಬೇಕು ಮತ್ತು ಯಾವುದೇ ಸಂದರ್ಭದಲ್ಲಾದರೂ ಕೇಂದ್ರ ಸಮಿತಿಯ ಒಟ್ಟು ಸದಸ್ಯರ ಅರ್ಧಕ್ಕಿಂತ ಹೆಚ್ಚು ಸದಸ್ಯರು ಮತ ನೀಡಬೇಕು.

(ಆ) ಕೇಂದ್ರ ಸಮಿತಿಯಲ್ಲಿ ಖಾಲಿಯಾದ ಯಾವುದೇ ಸ್ಥಾನವನ್ನು ಅದರ ಒಟ್ಟು ಸದಸ್ಯತ್ವದ ಸರಳ ಬಹುಮತದ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಬಹುದು.

(ಇ) ಕೇಂದ್ರ ಸಮಿತಿಯ ಒಬ್ಬ ಸದಸ್ಯ ಅಥವಾ ಸದಸ್ಯರು ಬಂಧಿಸಲ್ಪಟ್ಟಾಗ, ಉಳಿದ ಸದಸ್ಯರು ಆ ತೆರವಾದ ಸ್ಥಾನಗಳಿಗೆ ಬದಲಿ ಸದಸ್ಯರನ್ನು ತೆಗೆದುಕೊಳ್ಳಬಹುದು. ಈ ಸದಸ್ಯರು ಪೂರ್ಣ ಹಕ್ಕುಗಳನ್ನು ಹೊಂದಿರುತ್ತಾರೆ. ಆದರೆ ಬಂಧಿತರು ಬಿಡುಗಡೆಯಾಗಿ ತಮ್ಮ ಜವಾಬ್ದಾರಿಗಳನ್ನು ವಹಿಸಿಕೊಂಡಾಗ ಈ ಸದಸ್ಯರು ಆ ಸ್ಥಾನಗಳನ್ನು ತೆರವು ಮಾಡಬೇಕು.

8. ಕೇಂದ್ರ ಸಮಿತಿಯ ಎರಡು ಸಭೆಗಳ ನಡುವಿನ ಅವಧಿಯು ಸಾಮಾನ್ಯವಾಗಿ ಮೂರು ತಿಂಗಳು ಮೀರಬಾರದು ಮತ್ತು ಅದರ ಮೂರನೇ ಒಂದು ಭಾಗ ಸದಸ್ಯರು ಕೋರಿಕೆ ಸಲ್ಲಿಸಿದಾಗೆಲ್ಲಾ ಅದು ಸೇರತಕ್ಕದ್ದು.

9. ಕೇಂದ್ರ ಸಮಿತಿಯು ರಾಜಕೀಯ ಮತ್ತು ಸಂಘಟನಾ ಪ್ರಶ್ನೆಗಳನ್ನು ಮತ್ತು ಸಾಮೂಹಿಕ ಚಳುವಳಿಯ ಸಮಸ್ಯೆಗಳನ್ನು ಚರ್ಚಿಸಿ ತೀರ್ಮಾನಗಳನ್ನು ತೆಗೆದುಕೊಂಡು ರಾಜ್ಯ ಸಮಿತಿಗಳಿಗೆ ಮತ್ತು ಸಾಮೂಹಿಕ ಸಂಘಟನೆಗಳಲ್ಲಿರುವ ಪಕ್ಷದ ಅಖಿಲ ಭಾರತ ಫ್ರಾಕ್ಷನ್‌ಗಳಿಗೆ ಮಾರ್ಗದರ್ಶನ ನೀಡತಕ್ಕದ್ದು.

10. ಪಕ್ಷದ ಹಣಕಾಸಿನ ಜವಾಬ್ದಾರಿ ಕೇಂದ್ರ ಸಮಿತಿಗೆ ಸೇರಿದ್ದು, ಪೊಲಿಟ್ ಬ್ಯೂರೋ ವರ್ಷಕ್ಕೊಂದು ಬಾರಿ ತನಗೊಪ್ಪಿಸುವ ಲೆಕ್ಕಪತ್ರಗಳ ಹೇಳಿಕೆಯನ್ನು ಅದು ಅಂಗೀಕರಿಸುವುದು.

11. ಪಕ್ಷದ ಮಹಾಧಿವೇಶನವನ್ನು ಕರೆದಾಗೆಲ್ಲಾ ಅದರ ಮುಂದೆ ಕೇಂದ್ರ ಸಮಿತಿಯು

ತನ್ನ ರಾಜಕೀಯ ಮತ್ತು ಸಂಘಟನಾ ವರದಿಯನ್ನು ಇಡತಕ್ಕದ್ದು.

12. ಪಕ್ಷದ ಕ್ರಾಂತಿಕಾರಿ ನಾಯಕತ್ವವನ್ನು ಬಲಗೊಳಿಸಲು ಮತ್ತು ರಾಜ್ಯ ಹಾಗೂ ಜಿಲ್ಲಾ ಸಂಘಟನೆಗಳ ಮೇಲಿನ ತಪಾಸಣೆಗಾಗಿ ಕೇಂದ್ರ ಸಮಿತಿಯು ಪ್ರತಿನಿಧಿಗಳನ್ನು ಮತ್ತು ಸಂಘಟಕರನ್ನು ಕಳುಹಿಸುವುದು. ಇವರು ಕೇಂದ್ರ ಸಮಿತಿ ಅಥವಾ ಪೊಲಿಟ್‌ಬ್ಯೂರೋ ಪ್ರತಿಸಲ ಕೊಡುವ ವಿಶೇಷ ನಿರ್ದೇಶನಗಳ ಆಧಾರದಲ್ಲಿ ಕೆಲಸ ಮಾಡತಕ್ಕದ್ದು.

13. ಕೇಂದ್ರ ಸಮಿತಿಯು ತನಗೆ ಅಗತ್ಯವೆಂದು ಕಂಡುಬಂದಾಗ ಕೇಂದ್ರ ಸಮಿತಿಯ ವಿಸ್ತೃತ ಸಭೆಯನ್ನಾಗಲೀ, ಪ್ಲೀನಮ್ ಆಗಲೀ ಅಥವಾ ಸಮ್ಮೇಳನವನ್ನಾಗಲೀ ಕರೆಯಬಹುದು. ಇಂತಹ ಅಂಗಸಭೆಗಳಲ್ಲಿ ಹಾಜರಾತಿಯ ಆಧಾರವನ್ನು ಮತ್ತು ಪ್ರತಿನಿಧಿಗಳನ್ನು ಚುನಾಯಿಸುವ ವಿಧಾನವನ್ನು ಕೇಂದ್ರ ಸಮಿತಿ ನಿರ್ಧರಿಸುತ್ತದೆ.

14. ತುರ್ತು ಪರಿಸ್ಥಿತಿ ಸಂದರ್ಭದಲ್ಲಾಗಲೀ, ದೊಡ್ಡ ಪ್ರಮಾಣದಲ್ಲಿ ಬಂಧನಗಳು ನಡೆದ ಸಂದರ್ಭಗಳಲ್ಲಾಗಲೀ ಕೇಂದ್ರ ಸಮಿತಿ, ರಾಜ್ಯ ಸಮಿತಿಗಳು ಮತ್ತು ಜಿಲ್ಲಾ ಸಮಿತಿಗಳನ್ನು ಚಿಕ್ಕ ಮತ್ತು ಭದ್ರವಾದ ಅಂಗಗಳಾಗಿ ಪುನರ್ ಸಂಘಟಿಸಲಾಗುವುದು. ಕೇಂದ್ರ ಸಮಿತಿಯ ಅಂತಹ ಪುನರ್ ಸಂಘಟನೆಗೆ ಬೇಕಾದ ಹೆಸರುಗಳನ್ನು ಪೊಲಿಟ್ ಬ್ಯೂರೋದ ಉಳಿದ ಸದಸ್ಯರು ಸಿದ್ಧಪಡಿಸುವರು. ಇದಕ್ಕೆ ಒಳಗೆ ಮತ್ತು ಹೊರಗಿರುವ ಕೇಂದ್ರ ಸಮಿತಿಯ ಸದಸ್ಯರ ಅನುಮೋದನೆ ಇರತಕ್ಕದ್ದು. ರಾಜ್ಯ ಮತ್ತು ಜಿಲ್ಲಾ ಸಮಿತಿಗಳ ಪುನರ್ ಸಂಘಟನೆಗೆ ಆಯಾಯ ಸಮಿತಿಗಳ ಉಳಿದಿರುವ ಸದಸ್ಯರು ಹೆಸರುಗಳನ್ನು ಸೂಚಿಸಬೇಕು ಮತ್ತು ಸಂಬಂದಪಟ್ಟ ಸಮಿತಿಗಳ ಮೇಲಿನ ಸಮಿತಿಯ ಅನುಮೋದನೆ ಪಡೆಯಬೇಕು. ಅವರು ತಮ್ಮ ಕೆಲಸಗಳನ್ನು ಮತ್ತು ಜವಾಬ್ದಾರಿಗಳನ್ನು ಪೂರೈಸಲು ಅಗತ್ಯವೆನಿಸಿದಾಗ ಉಪಸಮಿತಿಗಳನ್ನು ರಚಿಸಿಕೊಳ್ಳಬಹುದು. ಪುನರ್ ಸಂಘಟಿತ ಕೇಂದ್ರ ಸಮಿತಿಗೆ ಪಕ್ಷದ ಸಂಘಟನೆಯನ್ನು ರಕ್ಷಿಸಲು ಬೇಕಾದ ನಿಯಮಗಳನ್ನು ರೂಪಿಸುವ ಅಧಿಕಾರವಿದೆ. ಪರಿಸ್ಥಿತಿಯು ಮಾಮೂಲು ಸ್ಥಿತಿಗೆ ಮರಳಿದಾಗ ಚುನಾಯಿಸಲ್ಪಟ್ಟ ಸಮಿತಿಗಳು ಮರುಸ್ಥಾಪನೆಗೊಳ್ಳುವವು.

15. ಯಾರೊಬ್ಬರೂ ಮೂರು ಪೂರ್ಣ ಅವಧಿಗಳಿಗಿಂತ ಹೆಚ್ಚು ಕಾಲ ಪ್ರಧಾನ ಕಾರ್ಯದರ್ಶಿ ಹುದ್ದೆಯನ್ನು ಹೊಂದಿರಬಾರದು. ಪೂರ್ಣ ಅವಧಿ ಅಂದರೆ ಪಕ್ಷದ ಎರಡು ಮಹಾಧಿವೇಶನಗಳ ನಡುವಿನ ಅವಧಿ ವಿಶೇಷ ಸಂದರ್ಭದಲ್ಲಿ, ಕೇಂದ್ರ ಸಮಿತಿಯು ನಾಲ್ಕರಲ್ಲಿ ಮೂರರಷ್ಟು ಬಹುಮತದೊಂದಿಗೆ ನಿರ್ಧರಿಸಿದಲ್ಲಿ, ಪ್ರಧಾನ ಕಾರ್ಯದರ್ಶಿಯಾಗಿ ಮೂರು ಪೂರ್ಣ ಅವಧಿಗಳನ್ನು ಪೂರೈಸಿದ ವ್ಯಕ್ತಿಯು ನಾಲ್ಕನೆಯ ಅವಧಿಗೆ ಪುನರಾಯ್ಕೆಯಾಗಬಹುದು. ಆದರೆ, ಯಾವುದೇ ಸಂದರ್ಭದಲ್ಲಿ ನಾಲ್ಕನೆಯ

ಅವಧಿಯನ್ನು ಪೂರೈಸಿದ ವ್ಯಕ್ತಿಯನ್ನು ಪುನಃ ಇನ್ನೊಂದು ಅವಧಿಗೆ ಆಯ್ಕೆ ಮಾಡುವಂತಿಲ್ಲ.

ನಿಬಂಧನೆ–16

## ಪಕ್ಷದ ರಾಜ್ಯ ಮತ್ತು ಜಿಲ್ಲಾ ಅಂಗಗಳು

1. ರಾಜ್ಯ ಅಥವಾ ಜಿಲ್ಲೆಯ ಅತ್ಯುನ್ನತ ಅಂಗವೆಂದರೆ ರಾಜ್ಯದ ಅಥವಾ ಜಿಲ್ಲೆಯ ಸಮ್ಮೇಳನ. ಈ ಸಮ್ಮೇಳನವು ರಾಜ್ಯ ಅಥವಾ ಜಿಲ್ಲಾ ಸಮಿತಿಯನ್ನು ಚುನಾಯಿಸುವುದು.

2. (ಅ) ಪಕ್ಷದ ರಾಜ್ಯ ಅಥವಾ ಜಿಲ್ಲಾ ಸಂಘಟನೆಯ ರಚನೆ, ಹಕ್ಕುಗಳು ಮತ್ತು ಕರ್ತವ್ಯಗಳು ಅಖಿಲ ಭಾರತ ಮಟ್ಟದಲ್ಲಿ ಪಕ್ಷದ ರಚನೆ ಮತ್ತು ಕರ್ತವ್ಯಗಳಿಗೆ ಸಂಬಂಧಪಟ್ಟಂತೆ ಇರುವ ನಿಬಂಧನೆಗಳಲ್ಲಿ ವಿವರಿಸಿದ ರೀತಿಯಲ್ಲಿಯೇ ಇರುತ್ತವೆ. ಆದರೆ ಅವುಗಳು ರಾಜ್ಯ ಅಥವಾ ಜಿಲ್ಲಾಪ್ರಶ್ನೆಗಳಿಗೆ ಸೀಮಿತವಾಗಿರುತ್ತವೆ ಮತ್ತು ಅವುಗಳ ತೀರ್ಮಾನಗಳು ಅವುಗಳಿಗಿಂತ ಮೇಲಿನ ಪಕ್ಷದ ಅಂಗಗಳು ತೆಗೆದುಕೊಂಡ ತೀರ್ಮಾನಗಳ ಮಿತಿಗೆ ಒಳಪಟ್ಟಿರುತ್ತವೆ. ಪಕ್ಷದ ಈ ಸಮಿತಿಗಳ ಸದಸ್ಯರ ಸಂಖ್ಯೆ ಹೆಚ್ಚಿಸುವುದು ಅಗತ್ಯ ಎಂದು ಕಂಡುಬಂದರೆ ಅವುಗಳು ತಮ್ಮ ಮೇಲಿನ ಸಮಿತಿಗಳ ಅನುಮತಿ ಪಡೆದು ಹಾಗೆ ಮಾಡಬಹುದು.

(ಆ) ರಾಜ್ಯ ಅಥವಾ ಜಿಲ್ಲಾ ಸಮಿತಿ ಕಾರ್ಯದರ್ಶಿಯನ್ನೊಳಗೊಂಡ ಕಾರ್ಯದರ್ಶಿ ಮಂಡಳಿಯನ್ನು (ಸೆಕ್ರೆಟಾರಿಯಟ್) ಚುನಾಯಿಸತಕ್ಕದ್ದು. ಆದರೆ ಅದಕ್ಕಿಂತ ಮೇಲಿನ ಸಮಿತಿಯು ಒಪ್ಪಿಗೆ ಕೊಟ್ಟಲ್ಲಿ ರಾಜ್ಯ ಅಥವಾ ಜಿಲ್ಲಾ ಸಮಿತಿಗಳ ಕಾರ್ಯದರ್ಶಿ ಮಂಡಳಿ ಇರಬೇಕಾದುದಿಲ್ಲ.

(ಇ) ರಾಜ್ಯ ಅಥವಾ ಜಿಲ್ಲಾ ಸಮಿತಿಯ ಯಾವುದೇ ಸದಸ್ಯನನ್ನು ತೀವ್ರ ಶಿಸ್ತು ಭಂಗ, ದುರ್ನಡತೆ, ಅಥವಾ ಪಕ್ಷ ವಿರೋಧಿ ಚಟುವಟಿಕೆಗಳಿಗಾಗಿ ರಾಜ್ಯ ಅಥವಾ ಜಿಲ್ಲಾ ಸಮಿತಿಯು ಒಟ್ಟು ಸದಸ್ಯರ ಬಹುಮತ ನಿರ್ಣಯದ ಮೇಲೆ ತೆಗೆದುಹಾಕತಕ್ಕದ್ದು.

3. (ಅ) ಚಳುವಳಿಯ ಅವಶ್ಯಕತೆಗಳನ್ನು ಗಣನೆಗೆ ತೆಗೆದುಕೊಂಡು ಜಿಲ್ಲಾ ಸಮಿತಿಯ ಕಾರ್ಯಕ್ಷೇತ್ರ ಎಷ್ಟಿರಬೇಕೆಂದು ರಾಜ್ಯ ಸಮಿತಿಯು ನಿರ್ಣಯಿಸತಕ್ಕದ್ದು. ಅದು ಆಡಳಿತ ವಿಭಾಗಕ್ಕೆ ಸೀಮಿತವಾಗಿರಬೇಕಾಗಿಲ್ಲ.

(ಆ) ಪ್ರಾಥಮಿಕ ಘಟಕ (ಶಾಖೆ) ಹಾಗೂ ಜಿಲ್ಲಾ ಅಥವಾ ಪ್ರಾದೇಶಿಕ ಸಮಿತಿಯ ನಡುವಿನ ಪಕ್ಷದ ವಿವಿಧ ಅಂಗಗಳನ್ನು ರಚಿಸುವ ಬಗ್ಗೆ ರಾಜ್ಯ ಸಮಿತಿಯು ಅಗತ್ಯವಾದ ನಿರ್ಣಯಗಳನ್ನು ಕೈಗೊಂಡು, ಅವುಗಳ ರಚನೆ ಮತ್ತು ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಅಗತ್ಯವಾದ ವ್ಯವಸ್ಥೆಯನ್ನು

ಮಾಡಿಕೊಳ್ಳತಕ್ಕದ್ದು. ಕೇಂದ್ರ ಸಮಿತಿಯು ರೂಪಿಸುವ ನಿಯಮಗಳಿಗೆ ಅನುಗುಣವಾಗಿ ಇದನ್ನು ಮಾಡಲಾಗುವುದು.

4. ಯಾರೊಬ್ಬರೂ ಮೂರು ಪೂರ್ಣ ಅವಧಿಗಳಿಗಿಂತ ಹೆಚ್ಚು ಕಾಲ ರಾಜ್ಯ/ಜಿಲ್ಲಾ/ಮಧ್ಯಂತರ ಸಮಿತಿಯ ಕಾರ್ಯದರ್ಶಿ ಹುದ್ದೆಯನ್ನು ಹೊಂದಿರಬಾರದು. ಪೂರ್ಣ ಅವಧಿ ಅಂದರೆ ಸಂಬಂಧಪಟ್ಟ ಸಮಿತಿಯ ಎರಡು ಸಮ್ಮೇಳನಗಳ ನಡುವಿನ ಅವಧಿ. ವಿಶೇಷ ಸಂದರ್ಭದಲ್ಲಿ, ಸಂಬಂಧಪಟ್ಟ ಸಮಿತಿಯು ನಾಲ್ಕರಲ್ಲಿ ಮೂರರಷ್ಟು ಬಹುಮತದೊಂದಿಗೆ ನಿರ್ಧರಿಸಿ ರಾಜ್ಯ ಸಮಿತಿಯ ಒಪ್ಪಿಗೆಯನ್ನು ಪಡೆದಲ್ಲಿ ಮೂರು ಪೂರ್ಣ ಅವಧಿಗಳನ್ನು ಪೂರೈಸಿದ ವ್ಯಕ್ತಿಯು ನಾಲ್ಕನೆಯ ಅವಧಿಗೆ ಪುನರಾಯ್ಕೆಯಾಗಬಹುದು. ರಾಜ್ಯ ಕಾರ್ಯದರ್ಶಿ ವಿಷಯದಲ್ಲಿ ಕೇಂದ್ರ ಸಮಿತಿಯ ಒಪ್ಪಿಗೆ ಪಡೆಯಬೇಕು. ಆದರೆ, ಯಾವುದೇ ಸಂದರ್ಭದಲ್ಲಿ ನಾಲ್ಕನೆಯ ಅವಧಿಯನ್ನು ಪೂರೈಸಿದ ವ್ಯಕ್ತಿಯನ್ನು ಪುನಃ ಇನ್ನೊಂದು ಅವಧಿಗೆ ಆಯ್ಕೆಮಾಡುವಂತಿಲ್ಲ.

ನಿಬಂಧನೆ–17

## ಪ್ರಾಥಮಿಕ ಘಟಕ

1. (ಅ) ವೃತ್ತಿ ಅಥವಾ ಪ್ರದೇಶದ ಆಧಾರದಲ್ಲಿ ಸಂಘಟಿಸುವ ಪಕ್ಷದ ಶಾಖೆ ಪಕ್ಷದ ಪ್ರಾಥಮಿಕ ಘಟಕವಾಗಿರುತ್ತದೆ.

(ಆ) ಪಕ್ಷದ ಸದಸ್ಯರನ್ನು ಅವರು ಯಾವುದೇ ಒಂದು ಕಾರ್ಖಾನೆ ಅಥವಾ ಸಂಸ್ಥೆ ಅಥವಾ ಕೈಗಾರಿಕೆಯಲ್ಲಿ ದುಡಿಯುತ್ತಿರುವಾಗ ಅವರ ಉದ್ಯೋಗ ಅಥವಾ ವೃತ್ತಿಯ ಆಧಾರದ ಮೇಲೆ ಸಂಘಟಿಸತಕ್ಕದ್ದು. ಇಂತಹ ಶಾಖೆಗಳನ್ನು ಸಂಘಟಿಸುವಾಗ ಇವುಗಳ ಸದಸ್ಯರು ತಾವು ವಾಸಿಸುವ ಪ್ರದೇಶದ ಶಾಖೆಗಳಲ್ಲಿ ಸಹ ಸದಸ್ಯರಾಗಿರುವರು. ಅಥವಾ ಅಲ್ಲಿ ಸಹಾಯಕ ಶಾಖೆಗಳಾಗಿ ಸಂಘಟಿಸಲ್ಪಡುವರು. ಅವರ ವಾಸಸ್ಥಳದಲ್ಲಿ ಅವರಿಗೆ ಕೊಡುವ ಕೆಲಸವು ಕಾರ್ಖಾನೆ ಅಥವಾ ಸಂಸ್ಥೆ ಅಥವಾ ವೃತ್ತಿಯ ಸ್ಥಳದಲ್ಲಿನ ಅವರ ಮೂಲ ಘಟಕವು ಅವರಿಗೆ ಕೊಡುವ ಕೆಲಸಗಳಿಗೆ ಯಾವ ರೀತಿಯಲ್ಲೂ ಬಾಧಕವಾಗಿರಕೂಡದು.

(ಇ) ಒಂದು ಶಾಖೆಯಲ್ಲಿನ ಸದಸ್ಯರ ಸಂಖ್ಯೆ ಹದಿನೈದಕ್ಕಿಂತ ಹೆಚ್ಚಿರಬಾರದು. ಶಾಖೆಯ ಕಾರ್ಯನಿರ್ವಹಣೆ ಮತ್ತು ಅದಕ್ಕೆ ಸಂಬಂಧಪಟ್ಟ ಇತರ ವಿಚಾರಗಳನ್ನು ರಾಜ್ಯ ಸಮಿತಿಯು ನಿರ್ಧರಿಸುತ್ತದೆ.

2. ಶಾಖೆಯು ತನ್ನ ಕಾರ್ಯಕ್ಷೇತ್ರ ಪರಿಮಿತಿಯಲ್ಲಿರುವ ಕಾರ್ಮಿಕರು ರೈತರು ಹಾಗೂ ಇತರ ಜನವಿಭಾಗಗಳು ಮತ್ತು ಪಕ್ಷದ ಪ್ರಮುಖ ಸಮಿತಿಯ ನಡುವೆ ಇರುವ ಜೀವಂತ ಕೊಂಡಿ ಆಗಿರುತ್ತದೆ. ಅದರ ಕರ್ತವ್ಯಗಳು ಹೀಗಿವೆ:

(ಅ) ಮೇಲಿನ ಸಮಿತಿಯ ನಿರ್ದೇಶನಗಳನ್ನು ಜಾರಿಗೆ ತರುವುದು.

(ಆ) ಕಾರ್ಖಾನೆ ಅಥವಾ ಪ್ರದೇಶದಲ್ಲಿನ ಜನಸಮುದಾಯವನ್ನು ಪಕ್ಷದ ರಾಜಕೀಯ ಹಾಗೂ ಸಂಘಟನಾ ನಿರ್ಣಯಗಳಿಗೆ ಒಲಿಸಿಕೊಳ್ಳುವುದು.

(ಇ) ಸಮರಶೀಲರನ್ನು ಮತ್ತು ಸಹಾನುಭೂತಿಯುಳ್ಳವರನ್ನು ಚಟುವಟಿಕೆಗೆ ಸೆಳೆದು, ಅವರನ್ನು ಹೊಸ ಸದಸ್ಯರಾಗಿ ದಾಖಲು ಮಾಡಿ ಅವರಿಗೆ ರಾಜಕೀಯವಾಗಿ ಶಿಕ್ಷಣ ನೀಡುವುದು.

(ಈ) ಜಿಲ್ಲಾ, ಸ್ಥಳೀಯ ಅಥವಾ ನಗರ ಸಮಿತಿಗಳಿಗೆ ಅವುಗಳ ದಿನನಿತ್ಯದ ಸಂಘಟನಾ ಮತ್ತು ಹೋರಾಟದ ಕೆಲಸಗಳಲ್ಲಿ ಸಹಾಯ ಮಾಡುವುದು.

3. ದಿನನಿತ್ಯದ ಕೆಲಸಗಳನ್ನು ನಡೆಸಲು ಶಾಖೆಯು ತನ್ನ ಕಾರ್ಯದರ್ಶಿಯನ್ನು ಆಯ್ಕೆ ಮಾಡುತ್ತದೆ. ಅದನ್ನು ಮೇಲಿನ ಸಮಿತಿ ಅನುಮೋದಿಸುತ್ತದೆ.

ನಿಬಂಧನೆ–18

## ಕೇಂದ್ರ ಹಾಗೂ ರಾಜ್ಯ ನಿಯಂತ್ರಣಾ ಆಯೋಗ

1. ಪಕ್ಷದ ಮಹಾಧಿವೇಶನವು ನೇರವಾಗಿ ಒಂದು ಕೇಂದ್ರ ನಿಯಂತ್ರಣ ಆಯೋಗವನ್ನು ಆಯ್ಕೆ ಮಾಡತಕ್ಕದ್ದು. ಅದರಲ್ಲಿ ಐದಕ್ಕಿಂತ ಹೆಚ್ಚು ಸದಸ್ಯರಿರಕೂಡದು. ಈ ಆಯೋಗದ ಅಧ್ಯಕ್ಷರು ತಮ್ಮ ಹುದ್ದೆಯ ನಿಮಿತ್ತ ಕೇಂದ್ರ ಸಮಿತಿಯ ಸದಸ್ಯರಾಗಿರುತ್ತಾರೆ.

2. ನಿಯಂತ್ರಣಾ ಆಯೋಗವು ತೆಗೆದುಕೊಳ್ಳತಕ್ಕ ಪ್ರಕರಣಗಳು:

(ಅ) ಕೇಂದ್ರ ಸಮಿತಿ ಅಥವಾ ಪೊಲಿಟ್‌ಬ್ಯೂರೋ ಈ ಆಯೋಗಕ್ಕೆ ಒಪ್ಪಿಸಿದ ಶಿಸ್ತು ಕ್ರಮದ ಪ್ರಕರಣಗಳು

(ಆ) ರಾಜ್ಯ ಸಮಿತಿಯು ಕೈಗೊಂಡಿರುವ ಶಿಸ್ತುಕ್ರಮದ ವಿರುದ್ಧ ಸಲ್ಲಿಸಲಾದ ಮೇಲ್ಮನವಿ ಪ್ರಕರಣಗಳು.

(ಇ) ಪಕ್ಷದಿಂದ ವಜಾಮಾಡಲಾದ, ಪಕ್ಷದ ಪೂರ್ಣ ಸದಸ್ಯತ್ವದಿಂದ ಅಮಾನತುಗೊಳಿಸಿದ ಪ್ರಕರಣಗಳು ಮತ್ತು ಪಕ್ಷದ ಸದಸ್ಯತ್ವದಿಂದ ಕೈಬಿಟ್ಟ ತೀರ್ಮಾನಗಳ ವಿರುದ್ಧ ರಾಜ್ಯಸಮಿತಿಗೆ ಅಥವಾ ರಾಜ್ಯ ನಿಯಂತ್ರಣ ಆಯೋಗಕ್ಕೆ ಮನವಿ ಸಲ್ಲಿಸಿ ತಿರಸ್ಕತವಾದ ಪ್ರಕರಣಗಳು.

3. ಕೇಂದ್ರ ನಿಯಂತ್ರಣಾ ಆಯೋಗದ ತೀರ್ಮಾನವು ಅಂತಿಮವಾಗಿದ್ದು ಎಲ್ಲರೂ ಇದಕ್ಕೆ ಬದ್ಧರು. ಆದರೆ ವಿಶೇಷ ಸಂದರ್ಭಗಳಲ್ಲಿ ಕೇಂದ್ರ ಸಮಿತಿಯು ಕೇಂದ್ರ ನಿಯಂತ್ರಣ ಆಯೋಗದ ನಿರ್ಣಯಗಳನ್ನು ತಡೆಹಿಡಿಯಬಹುದು, ಬದಲಾಯಿಸಬಹುದು ಅಥವಾ ಹಿಂದಕ್ಕೆ ಪಡೆಯಬಹುದು. ಅಂತಹ ಯಾವುದೇ ತೀರ್ಮಾನಗಳು, ಹಾಜರಿದ್ದು ಮತ ಹಾಕಿದವರ ಪೈಕಿ ಮೂರರಲ್ಲಿ ಎರಡರಷ್ಟು ಬಹುಮತಕ್ಕೆ ಕಡಿಮೆಯಾಗದ ಬೆಂಬಲ ಪಡೆದಿರಬೇಕು. ಅಂತಹ

ಎಲ್ಲಾ ನಿರ್ಣಯಗಳನ್ನು ಮುಂದಿನ ಅಖಿಲ ಭಾರತ ಮಹಾಧಿವೇಶನದಲ್ಲಿ ವರದಿ ಮಾಡಬೇಕು.

4. ಕೇಂದ್ರ ಸಮಿತಿಯು, ನಿಯಂತ್ರಣಾ ಆಯೋಗದ ಕಾರ್ಯ ನಿರ್ವಹಣೆಗೆ ಅಗತ್ಯವಾದ ವಿವರವಾದ ನಿಯಮಗಳನ್ನು ಕೇಂದ್ರ ನಿಯಂತ್ರಣಾ ಆಯೋಗದೊಂದಿಗೆ ಸಮಾಲೋಚಿಸಿ ರೂಪಿಸುವುದು.

5. ಎರಡು ಮಹಾಧಿವೇಶನಗಳ ನಡುವಿನ ಅವಧಿಯಲ್ಲಿ ಕೇಂದ್ರ ನಿಯಂತ್ರಣ ಆಯೋಗದ ಸ್ಥಾನ ತೆರವಾದರೆ ತೆರವಾದ ಆ ಸ್ಥಾನವನ್ನು ತುಂಬುವ ಹಕ್ಕು ಕೇಂದ್ರ ಸಮಿತಿಗೆ ಇರುತ್ತದೆ.

6. ರಾಜ್ಯ ಸಮ್ಮೇಳನವು ಶಿಸ್ತುಕ್ರಮ ಪ್ರಕರಣಗಳನ್ನು ಪರಿಶೀಲಿಸಲು ಒಂದು ರಾಜ್ಯ ನಿಯಂತ್ರಣಾ ಆಯೋಗವನ್ನು ಚುನಾಯಿಸಬಹುದು. ಯಾವುದೇ ರಾಜ್ಯದಲ್ಲಿ ಇಂತಹ ರಾಜ್ಯ ನಿಯಂತ್ರಣಾ ಆಯೋಗ ರಚಿಸಲ್ಪಟ್ಟಲ್ಲಿ ಅದರ ಕರ್ತವ್ಯಗಳು ಮತ್ತು ಅಧಿಕಾರವು ಕೇಂದ್ರ ನಿಯಂತ್ರಣಾ ಆಯೋಗದಂತೆಯೇ ಇರುತ್ತವೆ. ಆದರೆ ಅವು ರಾಜ್ಯದ ಪರಿಮಿತಿಯೊಳಗಷ್ಟೇ ಇರುತ್ತವೆ.

ನಿಬಂಧನೆ–19

## ಪಕ್ಷದ ಶಿಸ್ತು

1. ಪಕ್ಷದ ಐಕ್ಯತೆಯನ್ನು ಉಳಿಸಿಕೊಳ್ಳಲು ಮತ್ತು ಬಲಪಡಿಸಲು ಅದರ ಶಕ್ತಿ ಹೋರಾಟದ ಸಾಮರ್ಥ್ಯ, ಗೌರವವನ್ನು ವೃದ್ಧಿಸಲು ಮತ್ತು ಪ್ರಜಾಸತ್ತಾತ್ಮಕ ಕೇಂದ್ರವಾದದ ತತ್ವಗಳನ್ನು ಕಾರ್ಯಗತಗೊಳಿಸಲು ಶಿಸ್ತು ಅನಿವಾರ್ಯವಾಗಿದೆ. ಪಕ್ಷದ ಶಿಸ್ತನ್ನು ಕಟ್ಟುನಿಟ್ಟಾಗಿ ಪಾಲಿಸದಿದ್ದರೆ ಜನಸಮುದಾಯವನ್ನು ಹೋರಾಟಗಳಲ್ಲೂ ಕಾರ್ಯಚರಣೆಗಳಲ್ಲೂ ಮುನ್ನಡೆಸಲು ಪಕ್ಷಕ್ಕೆ ಸಾಧ್ಯವಾಗಲಾರದು, ಜನತೆಯ ಬಗ್ಗೆ ತನಗಿರುವ ಜವಾಬ್ದಾರಿಯನ್ನು ನಿರ್ವಹಿಸಲು ಕೂಡ ಸಾಧ್ಯವಾಗದು.

2. ಶಿಸ್ತು ಪಕ್ಷದ ಧ್ಯೇಯಧೋರಣೆಗಳ, ಕಾರ್ಯಕ್ರಮ ಮತ್ತು ನೀತಿಗಳ ಪ್ರಜ್ಞಾಪೂರ್ವಕ ಅಂಗೀಕಾರವನ್ನು ಆಧರಿಸಿರುತ್ತದೆ. ಪಕ್ಷದ ಸಂಘಟನೆಯಲ್ಲಿ ಅಥವಾ ಸಾರ್ವಜನಿಕ ಜೀವನದಲ್ಲಿ ಯಾವುದೇ ಸ್ಥಾನಮಾನವಿದ್ದರೂ ಪಕ್ಷದ ಎಲ್ಲಾ ಸದಸ್ಯರೂ ಒಂದೇ ತೆರನಾಗಿ ಪಕ್ಷದ ಶಿಸ್ತಿಗೆ ಒಳಪಟ್ಟಿರತಕ್ಕದ್ದು.

3. ಪಕ್ಷದ ಸಂವಿಧಾನ ಮತ್ತು ನಿರ್ಣಯಗಳನ್ನು ಉಲ್ಲಂಘಿಸುವುದಾಗಲಿ, ಕಮ್ಯೂನಿಸ್ಟ್ ಪಕ್ಷದ ಸದಸ್ಯರಿಗೆ ಯೋಗ್ಯವಲ್ಲದ ಇತರ ಯಾವುದೇ ನಡತೆ ಮತ್ತು ಕೃತ್ಯದಲ್ಲಿ ತೊಡಗುವುದಾಗಲೀ ಪಕ್ಷದ ಶಿಸ್ತಿನ ಉಲ್ಲಂಘನೆಯಾಗುತ್ತದೆ. ಇಂತಹವರು ಶಿಸ್ತು ಕ್ರಮಕ್ಕೆ ಒಳಗಾಗಬೇಕಾಗುವುದು.

4. ಶಿಸ್ತು ಕ್ರಮಗಳು ಹೀಗಿವೆ:

ಅ) ಎಚ್ಚರಿಕೆ

ಆ) ಖಂಡನೆ

ಇ) ಬಹಿರಂಗ ಖಂಡನೆ

ಈ) ಪಕ್ಷದಲ್ಲಿ ಹೊಂದಿರುವ ಸ್ಥಾನದಿಂದ ತೆಗೆದುಹಾಕುವುದು.

ಉ) ಪಕ್ಷದ ಸಂಪೂರ್ಣ ಸದಸ್ಯತ್ವದಿಂದ ಒಂದು ವರ್ಷಾವಧಿಗೆ ಮೀರದಂತೆ ಅಮಾನತುಗೊಳಿಸುವುದು

ಊ) ಪಕ್ಷದಿಂದ ವಜಾ ಮಾಡುವುದು

5. ಸಂಬಂಧಿಸಿದ ಸಂಗಾತಿಯನ್ನು ಹಿತೋಕ್ತಿ ವಿಧಾನವೂ ಸೇರಿದಂತೆ ಉಳಿದ ವಿಧಾನಗಳ ಮೂಲಕ ಸರಿಪಡಿಸಲಾಗದ ಸಂದರ್ಭದಲ್ಲಿ ಸಾಮಾನ್ಯವಾಗಿ ಶಿಸ್ತು ಕ್ರಮವನ್ನು ಕೈಗೊಳ್ಳತಕ್ಕದ್ದು. ಶಿಸ್ತು ಕ್ರಮವನ್ನು ಕೈಗೊಂಡಾಗಲೂ ಆ ಸಂಗಾತಿಗೆ ತನ್ನನ್ನು ಸರಿಪಡಿಸಿಕೊಳ್ಳಲು ಸಹಾಯ ಮಾಡುವ ಪ್ರಯತ್ನವನ್ನು ಮುಂದುವರಿಸಬೇಕು. ಪಕ್ಷದ ಹಿತ ಮತ್ತು ಪ್ರತಿಷ್ಠೆಯನ್ನು ಕಾಪಾಡಲು ತುರ್ತುಕ್ರಮ ಕೈಗೊಳ್ಳಬೇಕಾದಂತಹ ಪ್ರಕರಣಗಳಲ್ಲಿ ಶಿಸ್ತು ಕ್ರಮವನ್ನು ತಡವಿಲ್ಲದೆ ತೆಗೆದುಕೊಳ್ಳಬೇಕು.

6. ಶಿಸ್ತು ಕ್ರಮಗಳೆಲ್ಲದರಲ್ಲಿ ಪಕ್ಷದಿಂದ ವಜಾ ಮಾಡುವುದು ಅತ್ಯಂತ ತೀವ್ರವಾದ ಕ್ರಮವಾಗಿದೆ. ಇದನ್ನು ಬಹಳ ಎಚ್ಚರಿಕೆಯಿಂದಲೂ, ವಿವೇಚನೆಯಿಂದಲೂ, ತೂಗಿನೋಡಿ ಕೈಗೊಳ್ಳಬೇಕು.

7. ಪಕ್ಷದಲ್ಲಿ ಹೊಂದಿರುವ ಸ್ಥಾನದಿಂದ ತೆಗೆದು ಹಾಕುವ, ವಿಚಾರಣೆ ನಡೆಯುತ್ತಿರುವ ಪ್ರಸಂಗಗಳನ್ನು ಬಿಟ್ಟು ಪೂರ್ಣ ಸದಸ್ಯತ್ವದಿಂದ ಅಮಾನತ್ತುಗೊಳಿಸುವ ಹಾಗೂ ಪಕ್ಷದಿಂದ ವಜಾ ಮಾಡುವ ಯಾವುದೇ ಶಿಸ್ತು ಕ್ರಮವು ಮೇಲಿನ ಸಮಿತಿಯ ದೃಢೀಕರಣವಿಲ್ಲದೆ ಜಾರಿಗೆ ಬರುವುದಿಲ್ಲ. ಪಕ್ಷದಿಂದ ವಜಾ ಮಾಡಲಾದಾಗ ಶಿಕ್ಷೆಗೊಳಪಟ್ಟ ಪಕ್ಷದ ಸದಸ್ಯನನ್ನು ಶಿಕ್ಷೆ ದೃಢೀಕರಣಗೊಳ್ಳುವವರೆಗೆ ಪಕ್ಷದ ಎಲ್ಲಾ ಚಟುವಟಿಕೆಗಳಿಂದ ತೆಗೆದುಹಾಕಬೇಕು. ಈ ಶಿಸ್ತುಕ್ರಮವನ್ನು ಮೇಲಿನ ಸಮಿತಿ ದೃಢೀಕರಣ ಮಾಡುವವರೆಗೆ ಪಕ್ಷದಿಂದ ವಜಾ ಮಾಡಲ್ಪಟ್ಟ ಸದಸ್ಯ ಅಮಾನತ್ತಿನಲ್ಲಿರುತ್ತಾನೆ. ಆರು ತಿಂಗಳ ಒಳಗಾಗಿ ಮೇಲಿನ ಸಮಿತಿಯು ಈ ಕುರಿತು ತನ್ನ ನಿರ್ಣಯವನ್ನು ತಿಳಿಸಬೇಕು.

8. ಯಾವ ಸಂಗಾತಿಯ ವಿರುದ್ದವಾಗಿ ಶಿಸ್ತುಕ್ರಮವನ್ನು ತೆಗೆದುಕೊಳ್ಳುವ ಸೂಚನೆ ಇದೆಯೋ ಅಂತಹವರ ವಿರುದ್ಧ ಇರುವ ಆರೋಪಗಳನ್ನು, ದೂರುಗಳನ್ನು ಮತ್ತು ಪ್ರಸ್ತುತ ಇತರ ಸಂಗತಿಗಳ ಕುರಿತು ಅವರಿಗೆ ಪೂರ್ಣವಾದ ಮಾಹಿತಿಯನ್ನು ಒದಗಿಸತಕ್ಕದ್ದು. ಅವರು ಸೇರಿರುವ ಪಕ್ಷದ ಘಟಕಕ್ಕೆ ಖುದ್ದಾಗಿ ಹೇಳಿಕೆಯನ್ನು ಕೊಡುವ ಹಕ್ಕು ಅವರಿಗಿದೆ. ಅಲ್ಲದೆ ಅವರ ವಿರುದ್ಧವಾಗಿ

ಕ್ರಮ ಕೈಗೊಳ್ಳುವ ಪಕ್ಷದ ಯಾವುದೇ ಘಟಕಕ್ಕೆ ವಿವರಣೆಯನ್ನು ಸಲ್ಲಿಸುವ ಹಕ್ಕು ಅವರಿಗಿರುವುದು.

9. ಒಬ್ಬ ಸದಸ್ಯರು ಪಕ್ಷದ ಎರಡು ಘಟಕಗಳ ಸದಸ್ಯರಾಗಿರುವಾಗ ಕೆಳಗಿನ ಘಟಕವು ಅವರ ಮೇಲೆ ಶಿಸ್ತುಕ್ರಮ ತೆಗೆದುಕೊಳ್ಳಲು ಶಿಫಾರಸು ಮಾಡಬಹುದು. ಆದರೆ ಮೇಲಿನ ಘಟಕದಿಂದ ಅದು ಅಂಗೀಕಾರವಾಗುವವರೆಗೆ ಶಿಸ್ತುಕ್ರಮ ಜಾರಿಗೆ ಬರಲಾರದು.

10. ಮುಷ್ಕರ ಮುರುಕರು, ಕುಡುಕರು, ಅನೀತಿವಂತರು, ಪಕ್ಷದ ವಿಶ್ವಾಸಕ್ಕೆ ದ್ರೋಹ ಬಗೆದವರು, ತೀವ್ರತರವಾದ ಹಣಕಾಸಿನ ಭ್ರಷ್ಟಾಚಾರಕ್ಕೆ ಒಳಗಾದವರೆಂದು ಕಂಡು ಬಂದ ಪಕ್ಷದ ಸದಸ್ಯರನ್ನು ಅವರು ಸೇರಿರುವ ಪಕ್ಷದ ಘಟಕವು ಅಥವಾ ಯಾವುದೇ ಮೇಲಿನ ಘಟಕವು ಅವರಿಗೆ ಆರೋಪಗಳ ಪಟ್ಟಿಯನ್ನು ಕೊಟ್ಟು ಅವರಿಂದ ವಿವರಣೆಯನ್ನು ಪಡೆಯುವ ಮೊದಲೇ ತಕ್ಷಣ ಪಕ್ಷದಿಂದ ಅಮಾನತಿನಲ್ಲಿಟ್ಟು ಪಕ್ಷದ ಎಲ್ಲಾ ಜವಾಬ್ದಾರಿ ಸ್ಥಾನಗಳಿಂದ ತೆಗೆದುಹಾಕಬಹುದು. ಆದರೆ ಈ ರೀತಿ ತಕ್ಷಣ ಅಮಾನತು ಮತ್ತು ಪಕ್ಷದ ಜವಾಬ್ದಾರಿ ಸ್ಥಾನಗಳಿಂದ ತೆಗೆದುಹಾಕುವ ಕ್ರಮ ಮೂರು ತಿಂಗಳ ಅವಧಿಯನ್ನು ಮೀರಬಾರದು.

11. ಶಿಸ್ತುಕ್ರಮದ ಎಲ್ಲಾ ಪ್ರಕರಣಗಳಲ್ಲಿಯೂ ಮೇಲ್ಮನವಿಯ ಹಕ್ಕು ಇರತಕ್ಕದ್ದು.

12. ಪಕ್ಷದ ಧೋರಣೆ ಮತ್ತು ತೀರ್ಮಾನಗಳನ್ನು ಪದೇ ಪದೇ ಉಲ್ಲಂಘಿಸುತ್ತಾ ತೀವ್ರವಾದ ಗುಂಪುಗಾರಿಕೆಯನ್ನು ಹೊಂದಿದ, ಇಲ್ಲವೆ ಪಕ್ಷದ ಶಿಸ್ತನ್ನು ಉಲ್ಲಂಘನೆ ಮಾಡಿದ ಸಂದರ್ಭಗಳಲ್ಲಿ ಕೆಳಸಮಿತಿಗಳನ್ನು ರದ್ದುಪಡಿಸುವ ಅಥವಾ ಹೊಸ ಸಮಿತಿಗಳನ್ನು ನೇಮಿಸುವ ಹಾಗೂ ಶಿಸ್ತುಕ್ರಮ ಕೈಗೊಳ್ಳುವ ಹಕ್ಕನ್ನು ಕೇಂದ್ರ, ರಾಜ್ಯ ಅಥವಾ ಜಿಲ್ಲಾಸಮಿತಿಗಳು ಹೊಂದಿರುತ್ತವೆ. ಆದರೆ ರಾಜ್ಯ ಮತ್ತು ಜಿಲ್ಲಾ ಸಮಿತಿಗಳು ಅಂತಹ ಕ್ರಮಗಳನ್ನು ತೆಗೆದುಕೊಳ್ಳುವಾಗ ತಮ್ಮ ಮೇಲಿನ ಸಮಿತಿಗೆ ಅಗತ್ಯ ಕ್ರಮಕ್ಕಾಗಿ ಕೂಡಲೇ ವರದಿ ಮಾಡಬೇಕು.

13. ವಿಶೇಷ ಪರಿಸ್ಥಿತಿಗಳಲ್ಲಿ ತೀವ್ರವಾದ ಪಕ್ಷವಿರೋಧಿ ಚಟುವಟಿಕೆಗಳ ಕಾರಣಕ್ಕಾಗಿ ಸದಸ್ಯರನ್ನು ಪಕ್ಷದ ಸಮಿತಿಗಳು ಸ್ವಂತ ವಿವೇಚನೆಯಿಂದ ತುರ್ತು ವಿಧಾನವನ್ನು ಅನುಸರಿಸಿ ಪಕ್ಷದಿಂದ ವಜಾಮಾಡಬಹುದು.

ನಿಬಂಧನೆ–20

## ಚುನಾಯಿತ ಸಾರ್ವಜನಿಕ ಸಂಸ್ಥೆಗಳಲ್ಲಿ ಪಕ್ಷದ ಸದಸ್ಯರು

1. ಸಂಸತ್ತು, ರಾಜ್ಯ ಶಾಸನ ಸಭೆ ಅಥವಾ ಆಡಳಿತ ಮಂಡಳಿಗೆ ಆಯ್ಕೆಯಾದ ಪಕ್ಷದ ಸದಸ್ಯರು ತಾವೇ ಪಕ್ಷದ ಒಂದು ಗುಂಪಾಗಿ, ಪಕ್ಷದ ಸೂಕ್ತ ಸಮಿತಿಯ ಕೈಕೆಳಗೆ ಪಕ್ಷದ ಧೋರಣೆ, ನೀತಿಗಳು ಹಾಗೂ ನಿರ್ದೇಶನಗಳಿಗೆ

ಅನುಗುಣವಾಗಿ ಕಟ್ಟುನಿಟ್ಟಾಗಿ ಕೆಲಸ ಮಾಡಬೇಕು.

2. ಕಮ್ಯೂನಿಸ್ಟ್ ಶಾಸಕರು ದೃಢತೆಯಿಂದ ಜನತೆಯ ಹಿತಗಳನ್ನು ರಕ್ಷಿಸಬೇಕು. ಶಾಸನ ಸಭೆಯಲ್ಲಿ ಅವರ ಕೆಲಸವು ಚಳುವಳಿಯನ್ನು ಪ್ರತಿಬಿಂಬಿಸಬೇಕು ಮತ್ತು ಪಕ್ಷದ ನೀತಿಗಳನ್ನು ಎತ್ತಿ ಹಿಡಿದು ಜನಪ್ರಿಯಗೊಳಿಸಬೇಕು.
   ಕಮ್ಯೂನಿಸ್ಟ್ ಶಾಸಕರ ಶಾಸನ ಸಭೆಯೊಳಗಿನ ಕೆಲಸವನ್ನು ಪಕ್ಷವು ಹೊರಗೆ ನಡೆಸುವ ಚಟುವಟಿಕೆಗಳು ಮತ್ತು ಸಾಮೂಹಿಕ ಚಳುವಳಿಗಳ ಜೊತೆ ನಿಕಟವಾಗಿ ಸಂಯೋಜಿಸಿರಬೇಕು ಮತ್ತು ಪಕ್ಷವನ್ನು ಮತ್ತು ಸಾಮೂಹಿಕ ಸಂಘಟನೆಯನ್ನು ಕಟ್ಟುವಲ್ಲಿ ಸಹಾಯ ಮಾಡುವುದು ಎಲ್ಲಾ ಕಮ್ಯೂನಿಸ್ಟ್ ಶಾಸಕರ ಕರ್ತವ್ಯವಾಗಿದೆ.

3. ಕಮ್ಯೂನಿಸ್ಟ್ ಶಾಸಕರು ತಮ್ಮ ಮತದಾರರು ಮತ್ತು ಜನಸಮುದಾಯದೊಂದಿಗೆ ಅತ್ಯಂತ ನಿಕಟವಾದ ಸಂಪರ್ಕವನ್ನಿಟ್ಟುಕೊಳ್ಳಬೇಕು. ತಮ್ಮ ಶಾಸನ ಸಭೆಯ ಕೆಲಸದ ಮಾಹಿತಿಗಳನ್ನು ಅವರಿಗೆ ಅಗಿಂದಾಗ ಕೊಟ್ಟು ಅವರ ಸಲಹೆ ಸೂಚನೆಗಳನ್ನು ನಿರಂತರವಾಗಿ ಪಡೆಯತಕ್ಕದ್ದು.

4. ಕಮ್ಯೂನಿಸ್ಟ್ ಶಾಸಕರು ವೈಯುಕ್ತಿಕ ನಿಯತ್ತಿನ ಉನ್ನತ ಮಟ್ಟವನ್ನು ಕಾಪಾಡಿಕೊಂಡಿರಬೇಕು. ಸರಳ ಜೀವನವನ್ನು ನಡೆಸಬೇಕು. ಜನರ ಜೊತೆಗಿನ ವ್ಯವಹಾರಗಳಲ್ಲಿ ಮತ್ತು ಸಂಪರ್ಕಗಳಲ್ಲಿ ವಿನಯದಿಂದ ನಡೆದುಕೊಳ್ಳಬೇಕು. ಸ್ವಂತ ಹಿತಕ್ಕಿಂತ ಪಕ್ಷದ ಹಿತ ಮುಖ್ಯವೆಂದು ಪರಿಗಣಿಸಬೇಕು.

5. ಕಮ್ಯೂನಿಸ್ಟ್ ಶಾಸಕರು ಮತ್ತು ಸ್ಥಳೀಯ ಆಡಳಿತ ಸಂಸ್ಥೆಗಳ ಸದಸ್ಯರು ಪಡೆಯುವ ಸಂಬಳ ಮತ್ತು ಭತ್ಯೆಗಳು ಪಕ್ಷದ ಹಣವೆಂದು ಪರಿಗಣಿಸಲಾಗುವುದು. ಸಂಬಂಧಪಟ್ಟ ಪಕ್ಷದ ಸಮಿತಿಯು ಆ ಸದಸ್ಯರ ಸಂಬಳ ಮತ್ತು ಭತ್ಯೆಗಳನ್ನು ತೀರ್ಮಾನಿಸುತ್ತದೆ.

6. ನಗರಸಭೆ, ಪುರಸಭೆ, ಪಟ್ಟಣ ಅಥವಾ ಪ್ರದೇಶ ಸಮಿತಿಗಳು, ಜಿಲ್ಲಾ ಪರಿಷತ್‌ಗಳು, ಬ್ಲಾಕ್ ಸಮಿತಿಗಳು, ಗ್ರಾಮ ಪಂಚಾಯಿತಿಗಳು ಮೊದಲಾದ ಸ್ಥಳೀಯ ಸಂಸ್ಥೆಗಳಿಗೆ ಆಯ್ಕೆಯಾದ ಪಕ್ಷದ ಸದಸ್ಯರು ಪಕ್ಷದ ಸೂಕ್ತ ಸಮಿತಿ ಅಥವಾ ಶಾಖೆಯ ಕೈಕೆಳಗೆ ಕೆಲಸ ಮಾಡಬೇಕು. ಅವರು ತಮ್ಮನ್ನು ಆರಿಸಿದ ಮತದಾರರು ಹಾಗೂ ಜನಸಮುದಾಯದ ಜೊತೆ ದೈನಂದಿನ ಸಂಪರ್ಕವನ್ನಿಟ್ಟುಕೊಂಡಿರಬೇಕು ಮತ್ತು ಅಂತಹ ಚುನಾಯಿತ ಸಂಸ್ಥೆಗಳಲ್ಲಿ ಅವರ ಹಿತವನ್ನು ರಕ್ಷಿಸಬೇಕು. ಅವರು ತಮ್ಮನ್ನು ಆಯ್ಕೆ ಮಾಡಿದ ಮತದಾರರಿಗೂ ಜನತೆಗೂ ತಾವು ಮಾಡುತ್ತಿರುವ ಕೆಲಸದ ಬಗ್ಗೆ ನಿರಂತರವಾಗಿ ವರದಿ ಸಲ್ಲಿಸಿ ಅವರ ಸಲಹೆ ಮತ್ತು ಸೂಚನೆಗಳನ್ನು ಕೇಳಬೇಕು. ಇಂತಹ ಸ್ಥಳೀಯ ಸಂಸ್ಥೆಗಳಲ್ಲಿ ಮಾಡುವ ಕೆಲಸದೊಂದಿಗೆ ಹೊರಗಡೆ ತೀವ್ರ ಸಾಮೂಹಿಕ ಚಟುವಟಿಕೆಗಳನ್ನು ಸಂಘಟಿಸಬೇಕು.

7. ಸಂಸತ್ತು, ಶಾಸನಸಭೆಗಳು, ಪರಿಷತ್ತುಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ನಡೆಯುವ ಚುನಾವಣೆಗಳಲ್ಲಿ ಪಕ್ಷದ ಎಲ್ಲಾ ಉಮೇದುವಾರರ ನಾಮನಿರ್ದೇಶನಗಳು ಕೇಂದ್ರ ಸಮಿತಿಯ ಮಂಜೂರಾತಿಗೆ ಒಳಪಟ್ಟಿರುತ್ತವೆ. ನಗರಸಭೆ, ಪುರಸಭೆ, ಜಿಲ್ಲಾ ಮತ್ತು ಸ್ಥಳೀಯ ಮಂಡಳಿಗಳು, ಪಂಚಾಯಿತಿಗಳಿಗೆ, ಪಕ್ಷದ ಉಮೇದುವಾರರನ್ನು ನಾಮನಿರ್ದೇಶನ ಮಾಡಲು ಅಗತ್ಯವಾದ ನಿಯಮಗಳನ್ನು ರಾಜ್ಯ ಸಮಿತಿಗಳು ರಚಿಸಿಕೊಳ್ಳತಕ್ಕದ್ದು.

ನಿಬಂಧನೆ–20 ಅ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ವು ಕಾನೂನಿನನ್ವಯ ಅಸ್ಥಿತ್ವಕ್ಕೆ ಬಂದಿರುವ ಭಾರತದ ಸಂವಿಧಾನಕ್ಕೆ ಮತ್ತು ಸಮಾಜವಾದ, ಜಾತ್ಯಾತೀತತೆ ಹಾಗೂ ಪ್ರಜಾಪ್ರಭುತ್ವ ತತ್ವಗಳಿಗೆ ಬದ್ದವಾಗಿರುವುದು ಮತ್ತು ಅದು ಭಾರತದ ಸಾರ್ವಭೌಮತೆ, ಐಕ್ಯತೆ ಹಾಗೂ ಸಮಗ್ರತೆಯನ್ನು ಎತ್ತಿಹಿಡಿಯುವುದು.

ನಿಬಂಧನೆ–21

## ಪಕ್ಷದ ಆಂತರಿಕ ಚರ್ಚೆಗಳು

1. ಪಕ್ಷದ ಬೇರೆ ಬೇರೆ ಸಂಘಟನೆಗಳಲ್ಲಿ ಪಕ್ಷದ ಧೋರಣೆಗಳನ್ನು ಸಮಗ್ರವಾಗಿ, ಸ್ವತಂತ್ರವಾಗಿ ಮತ್ತು ವ್ಯವಹಾರಿಕ ರೀತಿಯಲ್ಲಿ ಚರ್ಚಿಸುವುದು ಪಕ್ಷದ ಐಕ್ಯತೆಯನ್ನು ಸಾಧಿಸಲು ಸಹಾಯಕವೂ ಮತ್ತು ಅವಶ್ಯವೂ ಆಗಿದೆ. ಇದು ಪಕ್ಷದ ಆಂತರಿಕ ಪ್ರಜಾಪ್ರಭುತ್ವದಿಂದಾಗಿ ಸದಸ್ಯರಿಗೆ ದೊರೆಯುವ ಪರಭಾರೆ ಮಾಡಲಾಗದ ಹಕ್ಕಾಗಿದೆ. ಆದರೆ ಪಕ್ಷದ ಧೋರಣೆಯ ಪ್ರಶ್ನೆಗಳ ಮೇಲೆ, ಪಕ್ಷದ ಐಕ್ಯ ನಿರ್ಧಾರ ಮತ್ತು ಐಕ್ಯ ಕಾರ್ಯಾಚರಣೆಯನ್ನು ಅಸ್ತವ್ಯಸ್ತಗೊಳಿಸುವಂತಹ ಕೊನೆಯಿಲ್ಲದ ಚರ್ಚೆ ಮಾಡುವುದು ಪಕ್ಷದ ಆಂತರಿಕ ಪ್ರಜಾಪ್ರಭುತ್ವದ ತೀವ್ರ ದುರುಪಯೋಗವಾಗುವುದು.
2. ಕೇಂದ್ರ ಸಮಿತಿಯು ಪಕ್ಷದ ಆಂತರಿಕ ಚರ್ಚೆಯನ್ನು ಅಖಿಲ ಭಾರತ ಮಟ್ಟದಲ್ಲಿ ಈ ಕೆಳಗೆ ಕಾಣಿಸಿದ ಸಂದರ್ಭಗಳಲ್ಲಿ ಸಂಘಟಿಸತಕ್ಕದ್ದು.
   (ಅ) ಕೇಂದ್ರ ಸಮಿತಿಗೆ ಅಗತ್ಯ ಎಂದು ಕಂಡು ಬಂದಾಗ;
   (ಆ) ಪಕ್ಷದ ಧೋರಣೆಗೆ ಸಂಬಂಧಿಸಿದ ಒಂದು ಪ್ರಮುಖ ಪ್ರಶ್ನೆಯ ಬಗ್ಗೆ ಕೇಂದ್ರ ಸಮಿತಿಯೊಳಗೆ ಸಾಕಷ್ಟು ಖಚಿತವಾದ ಬಹುಮತವಿಲ್ಲದಿದ್ದಾಗ,
   (ಇ) ಪಕ್ಷದ ಒಟ್ಟು ಸದಸ್ಯತ್ವದ ಮೂರರಲ್ಲೊಂದು ಭಾಗವನ್ನು ಪ್ರತಿನಿಧಿಸುವ ರಾಜ್ಯ ಸಮಿತಿಗಳು ಅಖಿಲ ಭಾರತ ಮಟ್ಟದಲ್ಲಿ ಪಕ್ಷದ ಆಂತರಿಕ ಚರ್ಚೆಗಾಗಿ ಕೋರಿಕೆ ಸಲ್ಲಿಸಿದಾಗ.

3. ಒಂದು ರಾಜ್ಯ ಸಮಿತಿಯು ಆ ರಾಜ್ಯಕ್ಕೆ ಸಂಬಂಧಿಸಿದಂತಹ ಪಕ್ಷದ ಧೋರಣೆಯನ್ನು ಕುರಿತಂತೆ ಒಂದು ಪ್ರಮುಖ ಪ್ರಶ್ನೆಯ ಮೇಲೆ, ತಾವಾಗಿಯೇ ಅಥವಾ ರಾಜ್ಯದ ಸದಸ್ಯರಲ್ಲಿ ಮೂರನೇ ಒಂದು ಭಾಗವನ್ನು ಪ್ರತಿನಿಧಿಸುವ ಜಿಲ್ಲಾ ಸಮಿತಿಗಳ ಕೋರಿಕೆಯ ಮೇರೆಗೆ ಕೇಂದ್ರ ಸಮಿತಿಯ ಅನುಮೋದನೆಯೊಂದಿಗೆ ಆಂತರಿಕ ಚರ್ಚೆಯನ್ನು ಏರ್ಪಡಿಸಬಹುದು.

4. ಪಕ್ಷದ ಆಂತರಿಕ ಚರ್ಚೆಯ ಕೇಂದ್ರ ಸಮಿತಿಯ ಮಾರ್ಗದರ್ಶನದಲ್ಲಿ ನಡೆಯಬೇಕು. ಚರ್ಚೆಯಲ್ಲಿರುವ ಪ್ರಶ್ನೆಗಳನ್ನು ಕೇಂದ್ರ ಸಮಿತಿ ರೂಪಿಸಬೇಕು. ಚರ್ಚೆಗೆ ಮಾರ್ಗದರ್ಶನ ನೀಡುವ ಕೇಂದ್ರ ಸಮಿತಿಯು ಚರ್ಚೆಯ ವಿಧಾನವನ್ನೂ ನಿರ್ಧರಿಸಬೇಕು.

ರಾಜ್ಯ ಸಮಿತಿಯು ಚರ್ಚೆಯನ್ನು ಕೈಗೊಳ್ಳುವಾಗ ಕೇಂದ್ರ ಸಮಿತಿಯ ಒಪ್ಪಿಗೆ ಪಡೆದು ಚರ್ಚೆಯಲ್ಲಿರುವ ಮುಖ್ಯ ವಿಷಯಗಳನ್ನು ರೂಪಿಸಿ, ಚರ್ಚೆಯ ವಿಧಾನವನ್ನೂ ನಿರ್ಧರಿಸಬೇಕು.

ನಿಬಂಧನೆ–22

## ಪಕ್ಷದ ಮಹಾಧಿವೇಶನ ಮತ್ತು ಸಮ್ಮೇಳನಗಳ ಪೂರ್ವಸಿದ್ಧತಾ ಚರ್ಚೆ

1. ಪಕ್ಷದ ಮಹಾಧಿವೇಶನಕ್ಕೆ ಎರಡು ತಿಂಗಳ ಮೊದಲು ಎಲ್ಲಾ ಘಟಕಗಳಲ್ಲಿ ಚರ್ಚಿಸುವುದಕ್ಕಾಗಿ ಕರಡು ನಿರ್ಣಯವನ್ನು ಕೇಂದ್ರ ಸಮಿತಿ ಬಿಡುಗಡೆ ಮಾಡಬೇಕು. ಕೇಂದ್ರ ಸಮಿತಿ ಕರಡು ನಿರ್ಣಯವನ್ನು ಬಿಡುಗಡೆ ಮಾಡಿದ ನಂತರ ಆದಷ್ಟು ಕೂಡಲೇ ರಾಜ್ಯ ಸಮಿತಿಗಳು ಆಯಾ ಭಾಷೆಗಳಲ್ಲಿ ಅದರ ಅನುವಾದ ಮಾಡಿ ಪ್ರತಿಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಎಲ್ಲಾ ಶಾಖಾ ಸಮಿತಿಗಳಿಗೆ ಕಡ್ಡಾಯವಾಗಿ ಕಳುಹಿಸಬೇಕು. ನಿರ್ಣಯಕ್ಕೆ ತಿದ್ದುಪಡಿಗಳನ್ನು ನೇರವಾಗಿ ಕೇಂದ್ರ ಸಮಿತಿಗೆ ಕಳುಹಿಸುವುದು. ಅವುಗಳ ಮೇಲೆ ತನ್ನ ವರದಿಯನ್ನು ಕೇಂದ್ರ ಸಮಿತಿಯು ಪಕ್ಷದ ಮಹಾಧಿವೇಶನದ ಮುಂದೆ ಮಂಡಿಸುವುದು.

2. ಪ್ರತಿಯೊಂದು ಹಂತದಲ್ಲೂ ಸಂಬಂಧಪಟ್ಟ ಸಮಿತಿಗಳು ಕೊಡುವ ವರದಿಗಳು ಮತ್ತು ನಿರ್ಣಯಗಳ ಆಧಾರದ ಮೇಲೆ ಸಮ್ಮೇಳನವು ನಡೆಯತಕ್ಕದ್ದು.

ನಿಬಂಧನೆ–23

## ಸಾಮೂಹಿಕ ಸಂಘಟನೆಗಳಲ್ಲಿ ಕೆಲಸ ಮಾಡುವ ಪಕ್ಷದ ಸದಸ್ಯರು

ಸಾಮೂಹಿಕ ಸಂಘಟನೆಗಳಲ್ಲಿ ಮತ್ತು ಅವುಗಳ ಕಾರ್ಯಕಾರಿ ಸಮಿತಿಗಳಲ್ಲಿ ಕೆಲಸ ಮಾಡುವ ಪಕ್ಷದ ಸದಸ್ಯರು, ತಮ್ಮನ್ನು ಫ್ರಾಕ್ಷನ್‌ಗಳು ಅಥವಾ ಫ್ರಾಕ್ಷನ್ ಸಮಿತಿಗಳಾಗಿ ಸಂಘಟಿಸಿಕೊಂಡು ಪಕ್ಷದ ಸೂಕ್ತ ಸಮಿತಿಯ

ಮಾರ್ಗದರ್ಶನದಲ್ಲಿ ಕೆಲಸ ಮಾಡತಕ್ಕದ್ದು. ಆಯಾ ಸಾಮೂಹಿಕ ಸಂಘಟನೆಗಳ ಐಕ್ಯತೆಯನ್ನೂ, ಜನ ತಳಹದಿಯನ್ನೂ ಮತ್ತು ಹೋರಾಟದ ಸಾಮರ್ಥ್ಯವನ್ನೂ ಬಲಪಡಿಸಲು ಅವರು ಯಾವಾಗಲೂ ಪ್ರಯತ್ನಿಸಬೇಕು.

ನಿಬಂಧನೆ–24

## ಉಪನಿಯಮಗಳು

ಪಕ್ಷದ ಸಂವಿಧಾನದ ಅಡಿಯಲ್ಲಿ ಹಾಗೂ ಅದಕ್ಕೆ ತಕ್ಕಂತೆ ನಿಯಮಗಳನ್ನು ಹಾಗೂ ಉಪನಿಯಮಗಳನ್ನೂ ಕೇಂದ್ರ ಸಮಿತಿಯು ರಚಿಸಬಹುದು. ಕೇಂದ್ರ ಸಮಿತಿಯ ಮಂಜೂರಾತಿಗೆ ಒಳಪಟ್ಟು ರಾಜ್ಯಸಮಿತಿಗಳು ಕೂಡಾ ಪಕ್ಷದ ಸಂವಿಧಾನದ ಅಡಿಯಲ್ಲಿ ಹಾಗೂ ಅದಕ್ಕನುಗುಣವಾಗಿ ನಿಯಮಗಳನ್ನೂ ಹಾಗೂ ಉಪನಿಯಮಗಳನ್ನೂ ಮಾಡಿಕೊಳ್ಳಬಹುದು.

ನಿಬಂಧನೆ–25

## ತಿದ್ದುಪಡಿ

ಪಕ್ಷದ ಸಂವಿಧಾನವನ್ನು ಪಕ್ಷದ ಮಹಾಧಿವೇಶನ ಮಾತ್ರವೇ ತಿದ್ದುಪಡಿ ಮಾಡತಕ್ಕದ್ದು. ಸಂವಿಧಾನ ತಿದ್ದುಪಡಿಯನ್ನು ಪ್ರಸ್ತಾವಗಳ ಸೂಚನಾ ಪತ್ರವನ್ನು ಪಕ್ಷದ ಮಹಾಧಿವೇಶನ ಸೇರುವುದಕ್ಕೆ ಎರಡು ತಿಂಗಳುಗಳಿಗೆ ಮೊದಲೇ ನೀಡತಕ್ಕದ್ದು.

# ಪಕ್ಷದ ಸಂವಿಧಾನದ ಅಧೀನವಿರುವ ನಿಯಮಗಳು

(2005 ರ ಡಿಸೆಂಬರ್ 14 ರಿಂದ 16ರವರೆಗೆ ನಡೆದ ಕೇಂದ್ರ ಸಮಿತಿ ಸಭೆಯಲ್ಲಿ ಅಂಗೀಕರಿಸಿದ ನಿಯಮಗಳನ್ನು ಒಳಗೊಂಡಿದೆ)

ನಿಬಂಧನೆ–4. ಪರಿಚ್ಛೇದ 10ರ ಅಡಿಯಲ್ಲಿ : **ಸದಸ್ಯತ್ವ**

**ಒಂದು ಘಟಕದಿಂದ ಇನ್ನೊಂದಕ್ಕೆ ಅಥವಾ**

**ಒಂದು ರಾಜ್ಯದಿಂದ ಇನ್ನೊಂದಕ್ಕೆ ಸದಸ್ಯರ ವರ್ಗಾವಣೆ ಕುರಿತು**

(ವಿವರಣೆ : ಒಂದು ರಾಜ್ಯದಿಂದ ಇನ್ನೊಂದಕ್ಕೆ ಎಲ್ಲಾ ವರ್ಗಾವಣೆಗಳನ್ನು ವಾಸ್ತವವಾಗಿ ಕೇಂದ್ರ ಸಮಿತಿಯೇ ಮಾಡುವುದಾದರೂ, ನೀಡಲಾಗುತ್ತಿರುವ ವಿವರಗಳು ಸಾಮಾನ್ಯವಾಗಿ ಪರಿಪೂರ್ಣವಾಗಿರುವುದಿಲ್ಲ. ಆದ್ದರಿಂದ ಪ್ರತಿಯೊಂದು ಮಟ್ಟದಲ್ಲಿ ಪ್ರತಿಯೊಬ್ಬ ಸದಸ್ಯನ ಸರಿಯಾದ ದಾಖಲೆಗಳನ್ನು ಇಟ್ಟುಕೊಳ್ಳಲು ಅನುಕೂಲವಾಗುವಂತೆ ಒಂದು ರಾಜ್ಯವು ಒಬ್ಬ ಸದಸ್ಯನನ್ನು ಇನ್ನೊಂದು ರಾಜ್ಯಕ್ಕೆ ವರ್ಗಾಯಿಸಲು ಕೇಂದ್ರವನ್ನು ಕೇಳಿಕೊಂಡಾಗ ಈ ಕೆಳಗಿನ ವಿವರಗಳನ್ನು ನೀಡಬೇಕು. ರಾಜ್ಯದೊಳಗಿನ ವರ್ಗಾವಣೆಗಳಿಗೂ ಇದು ಅನ್ವಯಿಸುತ್ತದೆ)

**ನಿಯಮಗಳು : ಸದಸ್ಯತ್ವದ ವರ್ಗಾವಣೆ**

1. ವರ್ಗಾವಣೆಯ ಪತ್ರದೊಂದಿಗೆ ಈ ಕೆಳಗಿನ ವಿವರಗಳನ್ನು ಒದಗಿಸಬೇಕು.
   ಸಂಗಾತಿಯ ಹೆಸರು :
   ವಯಸ್ಸು :
   ಪಕ್ಷಕ್ಕೆ ಸೇರಿದ ವರ್ಷ :
   ಅವನು / ಅವಳು ಸೇರಿರುವ ಘಟಕ :
   ಅವನು / ಅವಳು ಕೆಲಸ ಮಾಡುತ್ತಿದ್ದ ಸಾಮೂಹಿಕ ಸಂಘಟನೆ :
   ಮಾಸಿಕ ಲೆವಿ ಮತ್ತು ಪಾವತಿಯಾದ ಅವಧಿ :
   ಶಿಸ್ತಿನ ಕ್ರಮ ತೆಗೆದುಕೊಂಡ ಬಗ್ಗೆ ಯಾವುದೇ ದಾಖಲೆ :
   ಅವನು / ಅವಳು ಯಾವ ರಾಜ್ಯದಿಂದ ವರ್ಗಾವಣೆ ಹೊಂದಬೇಕು :
   ಅವನು / ಅವಳು ಯಾವ ರಾಜ್ಯಕ್ಕೆ ವರ್ಗಾವಣೆ ಹೊಂದಬೇಕು :
   ಪಕ್ಷದ ಸದಸ್ಯತ್ವ ನವೀಕರಿಸಿದ ವರ್ಷ :
   ಅವನನ್ನು / ಅವಳನ್ನು ಸಂಪರ್ಕಿಸಬಹುದಾದ ವಿಳಾಸ :

## ಸಹಾಯಕ ಗುಂಪುಗಳು

(ವಿವರಣೆ : ಸಾಮೂಹಿಕ ಹೋರಾಟಗಳಿಂದ ಹೊರಹೊಮ್ಮುವ ಸಮರಶೀಲರನ್ನು ಸಹಾಯಕ ಗುಂಪುಗಳಲ್ಲಿ ಸೇರಿಸಿ ಅವರಿಗೆ ತರಬೇತಿ ಹಾಗೂ ಶಿಕ್ಷಣ ನೀಡಿ ಮುಂದೆ

ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳಲು ಸಾಧ್ಯವಾಗಬೇಕೆಂದು ಸಾಲ್ಕಿಯಾ ಪ್ಲೀನಂನಲ್ಲಿ ನಿರ್ದೇಶಿಸಲಾಗಿದೆ. ಈ ದಿಸೆಯಲ್ಲಿ ನಿಯಮಗಳನ್ನು ರೂಪಿಸಲಾಗಿದೆ.)

1. ಪಕ್ಷದ ಘಟಕಗಳು ಸಾಮೂಹಿಕ ಆಂದೋಲನಗಳಲ್ಲಿ ಸಕ್ರಿಯವಾಗಿ ಭಾಗವಹಿಸುವವರನ್ನು, ಈ ಚಳುವಳಿಗಳಿಂದ ಮತ್ತು ಸಾಮೂಹಿಕ ಸಂಘಟನೆಗಳಿಂದ ಹೊರಹೊಮ್ಮುವ ಸಮರಶೀಲರನ್ನು ಸಹಾಯಕ ಗುಂಪುಗಳಾಗಿ ಸಂಘಟಿಸಲು ಕ್ರಮಗಳನ್ನು ಕೈಗೊಳ್ಳಬೇಕು. ಇವುಗಳು ವಿಶಾಲ ಸಹಾನುಭೂತಿಯುಳ್ಳವರ ಗುಂಪುಗಳಾಗಿರುತ್ತವೆ.
2. ಇಂತಹ ಸಹಾಯಕ ಗುಂಪುಗಳ ಸದಸ್ಯರಿಗೆ ಪಕ್ಷದ ಕಾರ್ಯಕ್ರಮ ಮತ್ತು ಮೂಲಭೂತ ಧೋರಣೆಗಳ ಕುರಿತು ಪಕ್ಷದ ಸಮಿತಿಗಳು ಶಿಕ್ಷಣ ಹಾಗೂ ತರಬೇತಿ ಏರ್ಪಡಿಸಿ ಆ ಮೂಲಕ ಅವರು ಅನತಿ ಕಾಲದಲ್ಲಿ ಪಕ್ಷದ ಉಮೇದುವಾದ ಸದಸ್ಯರಾಗುವ ಸಾಮರ್ಥ್ಯ ಹೊಂದುವಂತಾಗಬೇಕು.

ನಿಬಂಧನೆ–6 ರ ಅಡಿಯಲ್ಲಿ : **ಪಕ್ಷದ ಸದಸ್ಯತ್ವದ ದಾಖಲೆಗಳು**

**ನಿಯಮ :** ಸದಸ್ಯತ್ವದ ದಾಖಲೆಗಳನ್ನು ಜಿಲ್ಲಾ ಸಮಿತಿಯ ಉಸ್ತುವಾರಿಯಲ್ಲಿ ಇಡಬೇಕೆಂದು ಸಂವಿಧಾನದಲ್ಲಿ ತಿಳಿಸಲಾಗಿದೆ. ಯಾವುದೇ ರಾಜ್ಯದಲ್ಲಿ ಸಂಬಂಧಪಟ್ಟ ರಾಜ್ಯ ಸಮಿತಿಯು ನಿರ್ಣಯಿಸಿದರೆ ಅಂತಹ ದಾಖಲೆಗಳನ್ನು ಇಡುವುದನ್ನು ಮಧ್ಯಂತರ / ಸ್ಥಳೀಯ ಸಮಿತಿಗಳಿಗೆ ವಹಿಸಿಕೊಡಬಹುದು. ಆದರೆ ದಾಖಲೆಗಳ ಸತ್ಯಾಸತ್ಯತೆಯ ಮತ್ತು ಅವುಗಳ ದೃಢೀಕೃತ ಪ್ರತಿಗಳಿಗೆ ಅಂತಿಮ ಅಧಿಕಾರ ಜಿಲ್ಲಾ ಸಮಿತಿಯದ್ದೇ.

ನಿಬಂಧನೆ–7ರ ಅಡಿಯಲ್ಲಿ : **ಪಕ್ಷದ ಸದಸ್ಯತ್ವ ಪರಿಶೀಲನೆ**

(ವಿವರಣೆ : ಪರಿಚ್ಛೇದ 1 ರಲ್ಲಿ 'ಯಾವೊಬ್ಬ ಪಕ್ಷದ ಸದಸ್ಯರೂ ಯಾವ ಕಾರಣವಿಲ್ಲದೆ ಒಂದು ನಿರಂತರ ಅವಧಿಗೆ ಪಕ್ಷದ ಜೀವನ ಮತ್ತು ಚಟುವಟಿಕೆಗಳಲ್ಲಿ ಭಾಗವಹಿಸದೆ ಇದ್ದರೆ ಅಥವಾ ಪಕ್ಷದ ವಂತಿಗೆಯನ್ನು ಕೊಡಲು ತಪ್ಪಿದ್ದರೆ ಅವರನ್ನು ಪಕ್ಷದ ಸದಸ್ಯತ್ವದಿಂದ ಕೈಬಿಡಬಹುದು' ಎಂದು ಹೇಳಲಾಗಿದೆ. ಸಂವಿಧಾನದಲ್ಲಿ ಹೇಳಿದಂತೆ ಸಕಾರಣಗಳನ್ನು ನೀಡದೆ ಮನಬಂದಂತೆ ಸದಸ್ಯತ್ವದಿಂದ ಕೈಬಿಡುವುದರ ವಿರುದ್ಧ ಇದು ರಕ್ಷಣೆ ನೀಡುವುದು. ಅನುಸರಿಸಬೇಕಾದ ಕಾರ್ಯವಿಧಾನದ ಕುರಿತು ಕೆಲವು ನಿರ್ದಿಷ್ಟ ನಿಯಮಗಳು ಅಗತ್ಯ)

## ನಿಯಮಗಳು

1. ಒಬ್ಬ ಸದಸ್ಯರನ್ನು ಕೈ ಬಿಡಲು ಬಯಸುವ ಸಂಬಂಧಿಸಿದ ಘಟಕವು ಆ ಸದಸ್ಯರಿಗೆ ಅವನ/ಅವಳ ವಿವರಣೆ ನೀಡಲು ಅವಕಾಶ ಕೊಟ್ಟ ನಂತರ ಹಾಗೆ ಮಾಡಬಹುದು. ಯಾವುದೇ ಸದಸ್ಯರನ್ನು ಕೈಬಿಡುವ ನಿರ್ಧಾರವನ್ನು ಶಾಖೆಯು ಲಿಖಿತವಾಗಿ ಮೇಲಿನ ಸಮಿತಿಗೆ ತಿಳಿಸಬೇಕು.

2. ಮೇಲಿನ ಸಮಿತಿಯು ಸದಸ್ಯತ್ವವನ್ನು ದೃಢೀಕರಿಸುವಾಗ ಮತ್ತು ದಾಖಲಾತಿ ಮಾಡುವಾಗ ಪಕ್ಷದಿಂದ ಕೈಬಿಟ್ಟವರ ಪಟ್ಟಿಯನ್ನು ಪರಿಶೀಲಿಸಬೇಕು ಮತ್ತು ಆ ಕುರಿತಂತೆ ತನ್ನ ನಿರ್ದಿಷ್ಟ ಅಭಿಪ್ರಾಯವನ್ನು ನೀಡಬೇಕು.

3. ಸಂಬಂಧಪಟ್ಟ ಸಮಿತಿಗಳು ಮೇಲಿನ ಸಮಿತಿಗೆ ನವೀಕರಣದ ವರದಿಯನ್ನು ಕಳುಹಿಸಬೇಕು. ಅದರಲ್ಲಿ ಪಕ್ಷದ ಸದಸ್ಯತ್ವ ನೊಂದಣಿ, ಕೈಬಿಡಲಾದವರು, ವರ್ಗಾವಣೆಯಾದವರು ಮತ್ತು ಸದಸ್ಯತ್ವದ ಸಂಯೋಜನೆಯ ವಿವರಗಳನ್ನು ಕೊಡಬೇಕು.

4. ಪಕ್ಷದ ಸದಸ್ಯತ್ವವನ್ನು ನವೀಕರಿಸಲು ನವೀಕರಣ ನಮೂನೆಯನ್ನು ಸಂಬಂಧಿಸಿದ ಸದಸ್ಯರು ಪ್ರತಿ ವರ್ಷವೂ ಭರ್ತಿ ಮಾಡಬೇಕು. ಸದಸ್ಯರ ವಯಸ್ಸು, ಪಕ್ಷಕ್ಕೆ ಸೇರಿದ ವರ್ಷ, ಆದಾಯ ಮತ್ತು ಯಾವ ರಂಗದಲ್ಲಿ ಕೆಲಸ ಮಾಡುತ್ತಿರುವುದು ಇತ್ಯಾದಿ ಮೂಲಾಧಾರದ ಮಾಹಿತಿಗಳನ್ನು ಅದು ಒಳಗೊಂಡಿರಬೇಕು.

5. ಸದಸ್ಯತ್ವ ಶುಲ್ಕದ ರಶೀದಿಯನ್ನು ಸಂಬಂಧಿಸಿದ ಸದಸ್ಯರಿಗೆ ಕೊಡಬೇಕು.

6. ಪಕ್ಷದ ಸದಸ್ಯತ್ವದಿಂದ ಕೈ ಬಿಡುವ ತೀರ್ಮಾನವನ್ನು ಅದು ದೃಢೀಕೃತಗೊಂಡ ದಿನದಿಂದ 30 ದಿನಗಳ ಒಳಗಾಗಿ ಸಂಬಂಧಪಟ್ಟ ಪಕ್ಷದ ಘಟಕವು ಆ ಸದಸ್ಯನಿಗೆ ತಿಳಿಸಬೇಕು.

7. ಸಂಬಂಧಪಟ್ಟ ಸಂಗಾತಿಯು ಪಕ್ಷದ ಸದಸ್ಯತ್ವದಿಂದ ಕೈಬಿಟ್ಟ ಮಾಹಿತಿ ತಲುಪಿದ 30 ದಿನಗಳ ಒಳಗಾಗಿ ತನ್ನನ್ನು ಕೈ ಬಿಟ್ಟ ತೀರ್ಮಾನದ ವಿರುದ್ಧ ಮೇಲ್ಮನವಿ ಸಲ್ಲಿಸಬೇಕು.

ನಿಬಂಧನೆ–9ರ ಅಡಿಯಲ್ಲಿ :

**ಸದಸ್ಯತ್ವ ಶುಲ್ಕ**

**ನವೀಕರಣಗಳು :** (ವಿವರಣೆ : ನಿಬಂಧನೆ–9, ಪರಿಚ್ಛೇದ 1 ರಲ್ಲಿ – ವಾರ್ಷಿಕ ಸದಸ್ಯತ್ವ ಶುಲ್ಕವನ್ನು 'ಮಾರ್ಚ್ ತಿಂಗಳ ಕೊನೆಯೊಳಗೆ ಶಾಖೆ ಅಥವಾ ಘಟಕದ ಕಾರ್ಯದರ್ಶಿಗೆ ಕೊಡಬೇಕು' ಎಂದು ಹೇಳಲಾಗಿದೆ.

ಸದಸ್ಯತ್ವ ಶುಲ್ಕಗಳನ್ನು ಮಾರ್ಚ್ ಕೊನೆಯೊಳಗಷ್ಟೆ ಜಮಾ ಮಾಡಿದರೆ ಅದನ್ನು ಜಿಲ್ಲಾ/ರಾಜ್ಯ ಸಮತಿಗಳಿಗೆ ಸಮಯ ತೆಗೆದುಕೊಳ್ಳುತ್ತದೆ. ಹೀಗಾಗಿ ಈಗ ಕೇಂದ್ರ ಸಮಿತಿಯು ರಾಜ್ಯ ಸಮಿತಿಗಳಿಂದ ಸದಸ್ಯತ್ವ ಶುಲ್ಕದ ಕ್ರೋಢೀಕೃತ ಮೊತ್ತವನ್ನು ವಿವಿಧ ಅವಧಿಯಲ್ಲಿ ಪಡೆಯುತ್ತಿದೆ. ಈಗ ಈ ಅವಧಿಯು ಏಪ್ರಿಲ್‌ನಿಂದ ಡಿಸೆಂಬರ್‌ವರೆಗೂ ವಿಸ್ತರಿಸುತ್ತದೆ. ಸದಸ್ಯತ್ವ ಶುಲ್ಕ ಕೇಂದ್ರಕ್ಕೆ ತಲುಪಲು ಕೊನೆಯ ದಿನಾಂಕವನ್ನು ನಿಗದಿಪಡಿಸಬೇಕು.)

**ನಿಯಮಗಳು**

1. ಪಕ್ಷದ ಸದಸ್ಯತ್ವ ನವೀಕರಣ ಪ್ರತಿವರ್ಷ ಮಾರ್ಚ್ 31ರ ಒಳಗಾಗಿ ಮುಗಿದಿರಬೇಕು.
2. ರಾಜ್ಯ ಸಮಿತಿಗಳು ಸದಸ್ಯತ್ವ ಶುಲ್ಕಗಳನ್ನು ಕೇಂದ್ರಕ್ಕೆ ಪ್ರತಿವರ್ಷ ಮೇ 31ರ ಒಳಗಾಗಿ ಜಮಾ ಮಾಡಬೇಕು.
3. ಯಾವುದೇ ಅನಿರೀಕ್ಷಿತ ಬೆಳವಣಿಗೆಯ ಸಂದರ್ಭದಲ್ಲಿ ಈ ದಿನಾಂಕಗಳನ್ನು ಕೇಂದ್ರ ಸಮಿತಿ / ಪೊಲಿಟ್‌ಬ್ಯೂರೋ ಮಾತ್ರ ವಿಸ್ತರಿಸಬಹುದು.
4. ಚಾಲ್ತಿ ವರ್ಷದಲ್ಲಿ ಹೊಸ ಸದಸ್ಯರನ್ನು ನೊಂದಾಯಿಸಿದುದಕ್ಕೆ ಸಂಬಂಧಿಸಿ ಉಮೇದುವಾರ ಸದಸ್ಯತ್ವ ಶುಲ್ಕಗಳನ್ನು ವರ್ಷಾಂತ್ಯದಲ್ಲಿ ಅಥವಾ ಅದರ ಒಳಗೇ ಪಾವತಿ ಮಾಡಬೇಕು.

ಟಿಪ್ಪಣಿ : ಉಮೇದುವಾರ ಸದಸ್ಯರಾಗಿ ಹೊರ ಸದಸ್ಯರ ನೋಂದಣಿ (ನವೀಕರಣ ಅವಧಿಯ ನಂತರ ವರ್ಷದ ಉದ್ದಕ್ಕೂ ನಡೆಯುತ್ತದೆ. ಅವರ ಶುಲ್ಕಗಳನ್ನು ಕೇಂದ್ರ ಸಮಿತಿಗೆ ಪ್ರತ್ಯೇಕವಾಗಿ ಜಮಾ ಮಾಡಬೇಕು.

ನಿಬಂಧನೆ–10 ರ ಅಡಿಯಲ್ಲಿ : **ಪಕ್ಷದ ಲೆವಿ**

**ನಿಯಮಗಳು** : ಪಕ್ಷದ ಸದಸ್ಯರ ಲೆವಿ ದರಗಳು : ಪಕ್ಷದ ಸದಸ್ಯರ ಲೆವಿಯನ್ನು ಈ ಕೆಳಗಿನ ದರಗಳಲ್ಲಿ ಸಂಗ್ರಹಿಸಲು ಕೇಂದ್ರ ಸಮಿತಿ ನಿರ್ಧರಿಸಿದೆ.

| | |
|---|---|
| ಆದಾಯ ತಿಂಗಳಿಗೆ ರೂ.300 ರವರೆಗೆ | 25 ಪೈಸೆ |
| ತಿಂಗಳಿಗೆ ರೂ.301 ರಿಂದ 500 | 50 ಪೈಸೆ |
| ತಿಂಗಳಿಗೆ ರೂ.501 ರಿಂದ 1000 | ಶೇ.0.5 |
| ತಿಂಗಳಿಗೆ ರೂ.1001 ರಿಂದ 3000 | ಶೇ.1 |
| ತಿಂಗಳಿಗೆ ರೂ.3001 ರಿಂದ 5000 | ಶೇ.2 |
| ತಿಂಗಳಿಗೆ ರೂ.5001 ರಿಂದ 7000 | ಶೇ.3 |
| ತಿಂಗಳಿಗೆ ರೂ.7001 ರಿಂದ 8000 | ಶೇ.4 |
| ತಿಂಗಳಿಗೆ ರೂ.8001 ಕ್ಕಿಂತ ಹೆಚ್ಚು | ಶೇ.5 |

2. ಯಾವುದೇ ಸದಸ್ಯರು ಮೂರು ತಿಂಗಳಿಗೊಮ್ಮೆ ಅಥವಾ ವರ್ಷಕ್ಕೊಮ್ಮೆ ಲೆವಿ ಪಾವತಿ ಮಾಡುವುದಾದರೆ, ಅವನ/ಅವಳ ವಾರ್ಷಿಕ ಆದಾಯದ ಆಧಾರದಲ್ಲಿ ಮಾಸಿಕ ಆದಾಯವನ್ನು ಲೆಕ್ಕಹಾಕಿ, ಅದಕ್ಕನುಗುಣವಾಗಿ ಮೇಲಿನ ದರಗಳಲ್ಲಿ ಲೆವಿ ಎಷ್ಟಾಗುವುದೆಂದು ಲೆಕ್ಕ ಹಾಕಬೇಕು.

3. ಪಕ್ಷದ ಸದಸ್ಯರ ಕುಟುಂಬದ ಆದಾಯಕ್ಕೆ ತಮ್ಮ ಪಾಲನ್ನು ನೀಡುವ ಗಂಡ/ಹೆಂಡತಿ ಅಥವಾ ಇತರ ಯಾವುದೇ ಸದಸ್ಯರು ಪಕ್ಷದ ಸದಸ್ಯರಲ್ಲದಿದ್ದರೆ ಅವರ ಆದಾಯವನ್ನು ಲೆವಿ ದರಗಳನ್ನು ಲೆಕ್ಕ ಹಾಕುವಾಗ ಪರಿಗಣಿಸಬೇಕಾಗಿಲ್ಲ.

ಟಿಪ್ಪಣಿ

1. ವೇತನ ಪಡೆಯುವ ನೌಕರರ ಮತ್ತು ಮಜೂರಿ ಪಡೆಯುವವರ ಆದಾಯ ಎಂದರೆ, ತುಟ್ಟಿಭತ್ಯೆ ಮತ್ತು ಇತರ ಭತ್ಯೆಗಳೂ ಸೇರಿದಂತೆ ಅವರ ಎಲ್ಲಾ ಒಟ್ಟು ಆದಾಯ ಎಂದು ಪರಿಗಣಿಸಬೇಕು. ಇವುಗಳಲ್ಲದೆ ಒಬ್ಬ ಸದಸ್ಯರಿಗೆ ಭೂಮಿ, ವ್ಯಾಪಾರ, ಮನೆಗಳಿಂದ ಹೆಚ್ಚುವರಿ ಆದಾಯವಿದ್ದರೆ ಅದನ್ನೂ ಸಹ ಸೇರಿಸಬೇಕು.
2. ರೈತರಿಗೆ ಸಂಬಂಧಿಸಿದಂತೆ, ಕೃಷಿ ಉತ್ಪಾದನೆಗೆ ತಗುಲಿದ ಖರ್ಚು ವೆಚ್ಚಗಳ ಮೊತ್ತವನ್ನು ಕಳೆದು ನಂತರ ಉಳಿಯುವದನ್ನೇ ಆದಾಯ ಎಂದು ಪರಿಗಣಿಸಬೇಕು.
3. ಯಾರಾದರೊಬ್ಬರು ಅವಿಭಕ್ತ ಕುಟುಂಬದ ಆದಾಯದಿಂದ ಜೀವನ ನಡೆಸುತ್ತಿರುವುದಾದರೆ ಅವರ ಪಾಲಿನ ಆದಾಯವನ್ನು ಗಣನೆಗೆ ತೆಗೆದುಕೊಳ್ಳಬೇಕು.
4. ನಿರುದ್ಯೋಗ, ಬರಗಾಲ ಅಥವಾ ಅನಾರೋಗ್ಯದಂತಹ ವಿಷಮ ಪರಿಸ್ಥಿತಿಗಳಲ್ಲಿ, ಲೆವಿ ಪಾವತಿಗೆ ವಿನಾಯಿತಿ ನೀಡಬಹುದು. ಈ ಕುರಿತು ಸೂಕ್ತ ನಿರ್ಧಾರ ಕೈಗೊಳ್ಳುವುದು ಸಂಬಂಧಪಟ್ಟ ರಾಜ್ಯ ಸಮಿತಿಗೆ ಸೇರಿದ್ದು.

ಟಿಪ್ಪಣಿ : ಲೆವಿ ಸಂಗ್ರಹದಲ್ಲಿ ಸ್ಥಳೀಯ, ಪ್ರಾದೇಶಿಕ, ಜಿಲ್ಲಾ ಮತ್ತು ರಾಜ್ಯ ಸಮಿತಿಗಳ ನಡುವಿನ ಶೇಕಡಾವಾರು ಪಾಲುಗಳನ್ನು ಸಂಬಂಧಿಸಿದ ರಾಜ್ಯ ಸಮಿತಿ ನಿರ್ಧರಿಸುವುದು.

ನಿಬಂಧನೆ–15, ಪರಿಚ್ಛೇದ 10ರ ಅಡಿಯಲ್ಲಿ :

**ಕೇಂದ್ರ ಸಮಿತಿಯ ಹಣಕಾಸುಗಳು**

**ನಿಯಮಗಳು :**

1. ಕೇಂದ್ರ ಸಮಿತಿಯು ತನ್ನ ಆಸ್ತಿಗಳ ಉಸ್ತುವಾರಿ ನೋಡಿಕೊಳ್ಳಲು ಒಂದು ದತ್ತಿಯನ್ನು ನೇಮಿಸಲು ಅಧಿಕಾರ ಹೊಂದಿದೆ.
2. ಪಕ್ಷದ ಕೇಂದ್ರ ವ್ಯವಸ್ಥೆಯನ್ನು ನಡೆಸಿಕೊಂಡು ಬರಲು, ಕೇಂದ್ರ ಸಮಿತಿಯು ಪ್ರತಿವರ್ಷ ಅಥವಾ ಕಾಲಕಾಲಕ್ಕೆ ಪ್ರತಿಯೊಂದು ರಾಜ್ಯವು ಪಕ್ಷದ ನಿಧಿಗೆ ಅಥವಾ ಪಕ್ಷದ ವಿಶೇಷ ನಿಧಿಗೆ ಕೊಡಬೇಕಾದ ಮೊತ್ತವನ್ನು ನಿರ್ಧರಿಸುವುದು.
3. ಪೊಲಿಟ್ ಬ್ಯೂರೋ ಒಂದು ಹಣಕಾಸು ಉಪಸಮಿತಿಯನ್ನು ಸ್ಥಾಪಿಸುವುದು. ಅದು ಸಭೆ ಸೇರಿ :

(ಅ) ರೂ.ಹತ್ತು ಸಾವಿರವರೆಗಿನ ಮೊತ್ತದ ಹಣಕಾಸು ವಿಷಯಗಳ ಮತ್ತು ಖರ್ಚುವೆಚ್ಚಗಳ ಕುರಿತು ನಿರ್ಣಯಗಳನ್ನು ತೆಗೆದುಕೊಳ್ಳಬೇಕು. ಹೆಚ್ಚು ಮೊತ್ತದ ಖರ್ಚು ವೆಚ್ಚಗಳನ್ನು ಪಿಬಿ ಪರಿಶೀಲನೆಗೆ ಒಪ್ಪಿಸಬೇಕು.

(ಆ) ಹಣಕಾಸು ಉಪಸಮಿತಿಯು ಮೂರು ತಿಂಗಳಿಗೊಮ್ಮೆ ಕೇಂದ್ರ ಸಮಿತಿಯ ಮತ್ತು ಅದರ ಪ್ರತಿಷ್ಠಾನದ ಲೆಕ್ಕಪತ್ರಗಳನ್ನು ಪಿ.ಬಿ.ಗೆ ಸಲ್ಲಿಸಬೇಕು.

(ಇ) ಹಣಕಾಸು ಉಪಸಮಿತಿಯು (ಪಕ್ಷದ ಸಂವಿಧಾನದಲ್ಲಿ ಹೇಳಿದಂತೆ) ಪಿಬಿ ಅನುಮೋದಿಸಿದ ವಾರ್ಷಿಕ ಲೆಕ್ಕಪತ್ರಗಳನ್ನು ಅನುಮೋದನೆಗಾಗಿ ಕೇಂದ್ರ ಸಮಿತಿಗೆ ಸಲ್ಲಿಸಬೇಕು.

(ಈ) ಉಪಸಮಿತಿಯ ಒಬ್ಬ ಸದಸ್ಯರು ಪಕ್ಷದ ಆಯ ಮತ್ತು ವ್ಯಯಗಳ ಜವಾಬ್ದಾರಿಯನ್ನು ವಹಿಸಿಕೊಳ್ಳುವರು. ನಂತರ ಅವುಗಳನ್ನು ಅಂತಿಮಗೊಳಿಸಲು ಮತ್ತು ಸಂಯೋಜಿಸಲು ಲೆಕ್ಕಪತ್ರಗಳ ಜವಾಬ್ದಾರಿಯನ್ನು ವಹಿಸಿಕೊಂಡವರಿಗೆ ಹಸ್ತಾಂತರಿಸಲಾಗುವುದು.

(ಉ) ಪಕ್ಷದ ಪತ್ರಿಕೆಗಳ ಮತ್ತು ಇತರ ಪ್ರಕಾಶನಗಳ (ಇದ್ದರೆ) ಅರ್ಧವಾರ್ಷಿಕ ಲೆಕ್ಕಪತ್ರಗಳನ್ನು ಉಪಸಮಿತಿಗೆ ಸಲ್ಲಿಸಬೇಕು.

ನಿಬಂಧನೆ –16, ಪರಿಚ್ಛೇದ 3(ಆ) ರ ಅಡಿಯಲ್ಲಿ :

**ಪಕ್ಷದ ರಾಜ್ಯ ಮತ್ತು ಜಿಲ್ಲಾ ಅಂಗಗಳು,**
**ಮಧ್ಯಂತರ ಸಮಿತಿಗಳನ್ನು ರಚಿಸುವ ಕುರಿತು**

(ವಿವರಣೆ : ಪರಿಚ್ಛೇದ 3(ಆ) – "ಪ್ರಾಥಮಿಕ ಘಟಕ (ಶಾಖೆ) ಹಾಗೂ ಜಿಲ್ಲಾ ಅಥವಾ ಪ್ರಾದೇಶಿಕ ಸಮಿತಿಯ ನಡುವಿನ ಪಕ್ಷದ ವಿವಿಧ ಅಂಗಗಳನ್ನು ರಚಿಸುವ ಬಗ್ಗೆ ರಾಜ್ಯ ಸಮಿತಿಯು ಅಗತ್ಯವಾದ ನಿರ್ಣಯಗಳನ್ನು ಕೈಗೊಂಡು ಅವುಗಳ ರಚನೆ ಮತ್ತು ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಅಗತ್ಯವಾದ ವ್ಯವಸ್ಥೆಯನ್ನು ಮಾಡಿಕೊಳ್ಳತಕ್ಕದ್ದು. ಕೇಂದ್ರ ಸಮಿತಿಯು ರೂಪಿಸಿದ ನಿಯಮಗಳಿಗನುಗುಣವಾಗಿ ಇದನ್ನು ಮಾಡಲಾಗುವುದು" ಎಂದು ಹೇಳುತ್ತದೆ.)

ರಾಜ್ಯ ಸಮಿತಿಯು ಪ್ರಾಥಮಿಕ ಘಟಕ ಮತ್ತು ಜಿಲ್ಲಾ ಅಥವಾ ಪ್ರಾದೇಶಿಕ ಸಮಿತಿಯ ಮಧ್ಯಂತರ ಸಮಿತಿಗಳನ್ನು ಈ ಕೆಳಗಿನ ನಿಯಮಗಳ ಆಧಾರದಲ್ಲಿ ಸ್ಥಾಪಿಸಲು ನಿರ್ಧರಿಸಬಹುದು.

(ಅ) ರಚಿಸಲಿರುವ ಸಮಿತಿಗಳ ಗಾತ್ರವನ್ನು ರಾಜ್ಯ ಸಮಿತಿಯು ನಿರ್ಧರಿಸುವುದು.

(ಆ) ಅಂತಹ ಸಮಿತಿಯು ಆ ಮಟ್ಟದಲ್ಲಿ ನಡೆಯುವ ಸಮ್ಮೇಳನದ ಪ್ರತಿನಿಧಿಗಳಿಂದ ಆಯ್ಕೆಯಾಗುವುದು. ಈ ಸಮಿತಿಯು ಕಾರ್ಯದರ್ಶಿ ಮತ್ತು / ಅಥವಾ ಕಾರ್ಯದರ್ಶಿ ಮಂಡಳಿಯನ್ನು ಆಯ್ಕೆ ಮಾಡಬೇಕು.

(ಇ) ಮಧ್ಯಂತರ ಸಮಿತಿಯ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಮಾನದಂಡವನ್ನು ರಾಜ್ಯ ಸಮಿತಿ ನಿರ್ಧರಿಸುವುದು.

(ಈ) ಮಧ್ಯಂತರ ಸಮಿತಿಗಳು (ಸ್ಥಳೀಯ, ಪ್ರಾದೇಶಿಕ, ವಲಯ ಇತ್ಯಾದಿ) ರಾಜ್ಯ, ಜಿಲ್ಲಾ ಸಮಿತಿಗಳಿಗೆ ನಿರೂಪಿಸಿದ ಎಲ್ಲಾ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವುದು. ಇವುಗಳ ಚಟುವಟಿಕೆಗಳು ಆಯಾ ಸ್ಥಳೀಯ, ಪ್ರಾದೇಶಿಕ ಅಥವಾ ವಲಯದ ವ್ಯಾಪ್ತಿಗೆ ಸೀಮಿತವಾಗಿರುತ್ತವಷ್ಟೆ.

(ಉ) ಸಮನ್ವಯದ ಉದ್ದೇಶಗಳಿಗಾಗಿ ತಾತ್ಕಾಲಿಕ ನೇಮಕಾತಿಗಳ ಮೂಲಕ ರಚಿಸಲ್ಪಟ್ಟ ಸಮಿತಿಗಳಿಗೆ, ಪೂರ್ಣ ಪ್ರಮಾಣದ ಚುನಾಯಿತ ಸಮಿತಿಗಳಿಗಿರುವಂತೆ ಸರ್ವೇಸಾಮಾನ್ಯವಾದ ಅಧಿಕಾರಗಳು ಇರುವುದಿಲ್ಲ. ಅವುಗಳ ಕಾರ್ಯವ್ಯಾಪ್ತಿ ಅವುಗಳನ್ನು ನೇಮಕ ಮಾಡಿದ ಸಮಿತಿಗಳ ನಿರ್ಣಯಗಳ ಮಾರ್ಗದರ್ಶನಕ್ಕೊಳಪಟ್ಟಿರುತ್ತದೆ.

(ಊ) ಜಿಲ್ಲಾ ಸಮ್ಮೇಳನಗಳಿಗೆ ಮತ್ತು ಜಿಲ್ಲೆಯ ಕೆಳಗಿನ ಸಮಿತಿಗಳ ಸಮ್ಮೇಳನಗಳಿಗೆ ಪ್ರತಿನಿಧಿಗಳ ಸಂಖ್ಯೆಯನ್ನು ರಾಜ್ಯ ಸಮಿತಿ ನಿರ್ಧರಿಸುವುದು.

ನಿಬಂಧನೆ–16ರ ಅಡಿಯಲ್ಲಿ :

**ಕೇಂದ್ರ ಸಮಿತಿಯ ಕೆಳಗಿನ ಸಮಿತಿಗಳ (ರಾಜ್ಯ ಮತ್ತು ಜಿಲ್ಲಾ ಅಂಗಗಳ) ಪಕ್ಷದ ಹಣಕಾಸುಗಳ ಮತ್ತು ಲೆಕ್ಕ ಪತ್ರಗಳ ಕುರಿತಾದ ನಿಯಮಗಳು**

(ವಿವರಣೆ : ಕೇಂದ್ರ ಸಮಿತಿಯ ಹಣಕಾಸುಗಳಿಗೆ ಮತ್ತು ಲೆಕ್ಕಪತ್ರಗಳಿಗೆ ಸಂಬಂಧಿಸಿ ರಚಿಸಲಾದ ನಿಯಮಗಳ ರೀತಿಯಲ್ಲಿಯೇ ಈ ಕೆಳಗಿನ ನಿಯಮಗಳು ಎಲ್ಲಾ ಕೆಳಹಂತದ ಚುನಾಯಿತ ಸಮಿತಿಗಳಿಗೆ ಅನ್ವಯವಾಗುವುವು.)

(ಅ) ರಾಜ್ಯ ಮಟ್ಟದಲ್ಲಿ (ಮತ್ತು ಮಧ್ಯಂತರ / ಜಿಲ್ಲಾ ಸಮಿತಿಗಳಿಗೆ ರಾಜ್ಯ ಸಮಿತಿ ತೀರ್ಮಾನಿಸಿದಂತೆ) ಕಾರ್ಯದರ್ಶಿ ಮಂಡಳಿಯು ಸಂಬಂಧಪಟ್ಟ ಸಮಿತಿಯ ಹಣಕಾಸು ಉಪ ಸಮಿತಿಯನ್ನು ರಚಿಸುವುದು.

(ಆ) ಕಾರ್ಯದರ್ಶಿ ಮಂಡಳಿಯ ಉಸ್ತುವಾರಿಯಲ್ಲಿ ಈ ಉಪಸಮಿತಿಯು ಹಣದ ಬಟವಾಡೆ ಮತ್ತು ಲೆಕ್ಕ ಪತ್ರಗಳನ್ನು ಇಡುವ ಜವಾಬ್ದಾರಿಯನ್ನು ಹೊಂದಿರುತ್ತದೆ.

(ಇ) ಉಪಸಮಿತಿಯು ಅರ್ಧವಾರ್ಷಿಕ ಲೆಕ್ಕ ಪತ್ರವನ್ನು ಸಂಬಂಧಿಸಿದ ಪಕ್ಷದ ಸಮಿತಿಗೆ ಸಲ್ಲಿಸಬೇಕು ಮತ್ತು ಆ ಹೇಳಿಕೆಯನ್ನು ಮೇಲಿನ ಸಮಿತಿಗೆ ಕಳುಹಿಸಬೇಕು.

(ಈ) ಉಪಸಮಿತಿಯು ವಾರ್ಷಿಕ ಲೆಕ್ಕಪತ್ರಗಳನ್ನು ತಪಾಸಣೆ (ಆಡಿಟ್) ಮಾಡಬೇಕು ಮತ್ತು ಪಕ್ಷದ ಸಂಬಂಧಿಸಿದ ಸಮಿತಿಗೆ ಅಂಗೀಕಾರಕ್ಕಾಗಿ ಸಲ್ಲಿಸಬೇಕು.

(ಉ) ಜಿಲ್ಲಾ ಸಮಿತಿಯು ಪ್ರತಿ ವರ್ಷ ಜುಲೈ 31ರ ಒಳಗಾಗಿ ತನ್ನ ಮತ್ತು ಕೆಳಹಂತದ ಎಲ್ಲಾ ಚುನಾಯಿತ ಸಮಿತಿಗಳ ಕ್ರೋಢಿಕೃತ ವಾರ್ಷಿಕ

ಲೆಕ್ಕಪತ್ರಗಳನ್ನು ಚಾರ್ಟರ್ಡ್ ಅಕೌಂಟೆಂಟ್‌ರವರ ಮೂಲಕ ಆಡಿಟ್ ಮಾಡಿಸಿ ರಾಜ್ಯ ಸಮಿತಿಗೆ ಸಲ್ಲಿಸಬೇಕು.

(ಊ) ರಾಜ್ಯ ಸಮಿತಿಯು ತನ್ನ ಮತ್ತು ಕೆಳಹಂತದ ಎಲ್ಲಾ ಚುನಾಯಿತ ಸಮಿತಿಗಳ ಕ್ರೋಢಿಕೃತ ವಾರ್ಷಿಕ ಲೆಕ್ಕಪತ್ರಗಳನ್ನು ಚಾರ್ಟರ್ಡ್ ಅಕೌಂಟೆಂಟ್‌ರವರ ಮೂಲಕ ಆಡಿಟ್ ಮಾಡಿಸಿ ಪ್ರತಿ ವರ್ಷ ಆಗಸ್ಟ್ 31ರ ಒಳಗಾಗಿ ಕೇಂದ್ರ ಸಮಿತಿಗೆ ಸಲ್ಲಿಸಬೇಕು.

ನಿಬಂಧನೆ–18 ರ ಅಡಿಯಲ್ಲಿ :

**ಕೇಂದ್ರ ನಿಯಂತ್ರಣ ಆಯೋಗದ**
**ಕೆಲಸ ನಿರ್ವಹಣೆಯ ಕುರಿತು ನಿಯಮಗಳು**

1. ನಿಯಮ–18ರ ಅಡಿಯಲ್ಲಿ ಒಂದು ಪ್ರಸ್ತಾಪ ಅಥವಾ ಮೇಲ್ಮನವಿ ಬಂದರೆ, ಕೇಂದ್ರ ನಿಯಂತ್ರಣಾ ಆಯೋಗ ಆ ಕುರಿತು ತನಿಖೆ ಮಾಡಲು ಕ್ರಮ ತೆಗೆದುಕೊಳ್ಳಬೇಕು ಮತ್ತು ಆ ಕುರಿತು ನಿರ್ಣಯಿಸಬೇಕು.
2. ಪಕ್ಷದ ನೊಂದ ಸದಸ್ಯನಲ್ಲದೆ ಬೇರೆ ಯಾರೂ ಮೇಲ್ಮನವಿಯನ್ನು ಸಲ್ಲಿಸಬಾರದು.
3. ಪ್ರಕರಣದ ಕುರಿತು ನಿಜಸಂಗತಿಯನ್ನು ಖಚಿತಪಡಿಸಿಕೊಳ್ಳಲು ಮತ್ತು ನಿರ್ಧಾರಕ್ಕೆ ಬರಲು ಕೇಂದ್ರ ನಿಯಂತ್ರಣ ಆಯೋಗವು ಸಂಬಂಧಪಟ್ಟ ಘಟಕ/ಘಟಕಗಳು ಅಥವಾ ವ್ಯಕ್ತಿಗಳನ್ನು ನೇರವಾಗಿ ಸಂಪರ್ಕಿಸುವ ಅಥವಾ ವಿಚಾರಣೆ ನಡೆಸುವ ಹಕ್ಕು ಪಡೆದಿದೆ.
4. ಕೇಂದ್ರ ನಿಯಂತ್ರಣಾ ಆಯೋಗ ಸಾಮಾನ್ಯವಾಗಿ ಮೂರು ತಿಂಗಳಿಗೊಮ್ಮೆ ಸಭೆ ಸೇರಬೇಕು. ಅದರ ಅಧ್ಯಕ್ಷರು 14 ದಿನಗಳ ಪೂರ್ವಬಾವಿ ನೋಟೀಸು ನೀಡುವ ಮೂಲಕ ಸಭೆಯನ್ನು ಕರೆಯಬೇಕು,
5. ಆಯೋಗದ ಸದಸ್ಯರಲ್ಲಿ ಬಹುಸಂಖ್ಯಾತ ಸದಸ್ಯರು ಹಾಜರಿದ್ದರೆ ಸಭೆಯ ಕೋರಂ ಆಗುತ್ತದೆ. ಕೇಂದ್ರ ನಿಯಂತ್ರಣಾ ಆಯೋಗವು ಎಲ್ಲಾ ಸದಸ್ಯರು ಅಥವಾ ಬಹುಸಂಖ್ಯಾತ ಸದಸ್ಯರು ಒಪ್ಪಿದಲ್ಲಿ ಮಾತ್ರ ನಿರ್ಣಯ ತೆಗೆದುಕೊಳ್ಳಬಹುದು. ತೆಗೆದುಕೊಂಡ ನಿರ್ಣಯವನ್ನು ಗೈರು ಹಾಜರಿದ್ದ ಸದಸ್ಯರಿಗೆ ತಿಳಿಸಬಹುದು.
6. ಸರಳ ಹಾಗೂ ಜಟಿಲವಲ್ಲದ ಪ್ರಕರಣಗಳ ಕುರಿತು ಕೇಂದ್ರ ನಿಯಂತ್ರಣಾ ಆಯೋಗವು ತನ್ನ ಸದಸ್ಯರೊಡನೆ ಪತ್ರ ವ್ಯವಹಾರಗಳ ಮೂಲಕ ವಿಚಾರ ವಿನಿಮಯ ಮಾಡಿಕೊಂಡು ನಿರ್ಣಯ ತೆಗೆದುಕೊಳ್ಳಬಹುದು.
7. ಕೇಂದ್ರ ನಿಯಂತ್ರಣಾ ಆಯೋಗವು ತನ್ನ ನಿರ್ಣಯವನ್ನು ಮೇಲ್ಮನವಿ ಸಲ್ಲಿಸಿದವರಿಗೆ ಮತ್ತು ಸಂಬಂಧಪಟ್ಟ ರಾಜ್ಯ ಸಮಿತಿಗೆ ತಿಳಿಸುವುದು. ಕೇಂದ್ರ

ನಿಯಂತ್ರಣಾ ಆಯೋಗದ ನಿರ್ಣಯವನ್ನು ಸಂಬಂಧಪಟ್ಟ ಸಮಿತಿಗಳು ಕೂಡಲೇ ಜಾರಿಗೊಳಿಸಬೇಕು.

8. ಕೇಂದ್ರ ನಿಯಂತ್ರಣಾ ಆಯೋಗವು ತನ್ನ ಕಾರ್ಯಚಟುವಟಿಕೆಗಳ ಹಾಗೂ ನಿರ್ಣಯಗಳ ಕುರಿತು ಒಂದು ಸಮಗ್ರ ವರದಿಯನ್ನು ಕೇಂದ್ರ ಸಮಿತಿಗೆ ಕನಿಷ್ಟ ವರ್ಷಕ್ಕೆ ಒಮ್ಮೆಯಾದರೂ ಸಲ್ಲಿಸಬೇಕು.

9. ಈ ನಿಯಮಗಳು ರಾಜ್ಯ ನಿಯಂತ್ರಣಾ ಆಯೋಗಗಳಿಗೂ ಅಗತ್ಯವಾದ ಬದಲಾವಣೆಗಳೊಂದಿಗೆ ಅನ್ವಯ ಆಗುವುವು.

**ಕೇಂದ್ರ ನಿಯಂತ್ರಣಾ ಆಯೋಗವು**
**ತನ್ನ ಕೆಲಸ ಕಾರ್ಯಗಳನ್ನು ನಡೆಸುವ**
**ವಿಧಿ ವಿಧಾನಗಳ ಕುರಿತು ನಿಯಮಗಳು**

1. ಒಂದು ಮೇಲ್ಮನವಿ ತಲುಪಿದಾಗ, ಕೇಂದ್ರ ನಿಯಂತ್ರಣಾ ಆಯೋಗದ ಅಧ್ಯಕ್ಷರು ಈ ಪ್ರಕರಣದ ಕುರಿತು ಇತರ ಸದಸ್ಯರಿಗೂ ತಿಳಿಸಬೇಕು.

2. ಒಂದು ನಿರ್ದಿಷ್ಟ ವಿಚಾರಣೆಗಾಗಿ ತುರ್ತಾಗಿ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಅಧ್ಯಕ್ಷರು ಪ್ರಸ್ತಾವನೆ ಮಾಡಬೇಕು. ಕೇಂದ್ರ ನಿಯಂತ್ರಣಾ ಆಯೋಗದ ಇತರ ಸದಸ್ಯರೂ ಅದೇ ಪ್ರಕರಣದ ಕುರಿತ ತಮ್ಮ ಪ್ರಸ್ತಾವನೆಗಳನ್ನು ಕಳುಹಿಸಬಹುದು.

3. ಮೇಲ್ಮನವಿಯನ್ನು ಕುರಿತು ನಿರ್ಣಯ ಕೈಗೊಳ್ಳಲು ಬೇಕಾಗುವ ಯಾವುದೇ ಮಾಹಿತಿಯನ್ನು ಸಂಬಂಧಪಟ್ಟ ಸಮಿತಿಗಳಿಂದ ಮತ್ತು ಸದಸ್ಯರಿಂದ ಪಡೆಯಲು ಕೇಂದ್ರ ನಿಯಂತ್ರಣಾ ಸಮಿತಿಗೆ ಹಕ್ಕಿದೆ. ಅವರು ಅಂತಹ ಮಾಹಿತಿಯನ್ನು ಎರಡು ತಿಂಗಳುಗಳ ಒಳಗಾಗಿ ಕೇಂದ್ರ ನಿಯಂತ್ರಣಾ ಆಯೋಗಕ್ಕೆ ಕಳುಹಿಸಿಕೊಡಬೇಕು. ಈ ಅವಧಿಯ ಒಳಗಾಗಿ ಯಾವುದೇ ಮಾಹಿತಿ ಬಾರದಿದ್ದರೆ, ಕೇಂದ್ರ ನಿಯಂತ್ರಣಾ ಆಯೋಗವು ಆ ಪ್ರಕರಣದ ಕುರಿತು ಮುಂದುವರಿಯಬಹುದು.

## ಕೇಂದ್ರ ಸಮಿತಿ ಅನುಸರಿಸಬೇಕಾದ ವಿಧಿವಿಧಾನಗಳು:

ನಿಬಂಧನೆ 18, ಪರಿಚ್ಛೇದ 3ರ ಅಡಿಯಲ್ಲಿ ಕೇಂದ್ರ ಸಮಿತಿಯು ಕೇಂದ್ರ ನಿಯಂತ್ರಣ ಆಯೋಗದ ನಿರ್ಧಾರಗಳನ್ನು ತಡೆ ಹಿಡಿಯುವ, ಬದಲಾಯಿಸುವ ಅಥವಾ ಹಿಂದಕ್ಕೆ ಪಡೆಯುವ ವಿಶೇಷ ಪರಿಸ್ಥಿತಿಯಲ್ಲಿ ಅಂತಿಮ ನಿರ್ಣಯ ಕೈಗೊಳ್ಳುವ ಮೊದಲು ಕೇಂದ್ರ ನಿಯಂತ್ರಣ ಆಯೋಗದೊಂದಿಗೆ ಸಮಾಲೋಚನೆ ನಡೆಸುವುದು.

## ಪಕ್ಷದ ಶಿಸ್ತು

ನಿಬಂಧನೆ–19, ಪರಿಚ್ಛೇದ 11ರ ಅಡಿಯಲ್ಲಿ :

ಅ) ಪಕ್ಷದ ಸದಸ್ಯನ ವಿರುದ್ದ ಶಿಸ್ತು ಕ್ರಮ ಕೈಗೊಂಡ ಪಕ್ಷದ ಘಟಕವು, ತೀರ್ಮಾನ ತೆಗೆದುಕೊಂಡ 30 ದಿನಗಳ ಒಳಗಾಗಿ ಅಥವಾ ನಿಬಂಧನೆ 19ರ ಪರಿಚ್ಛೇದ 9ರ ಅಡಿಯಲ್ಲಿ ಮೇಲಿನ ಸಮಿತಿಯ ದೃಢೀಕರಣ ಅಗತ್ಯವಿದ್ದಲ್ಲಿ, ಆ ದೃಢೀಕರಣ ಪಡೆದ 30 ದಿನಗಳ ಒಳಗಾಗಿ ಸಂಬಂಧಪಟ್ಟ ಪಕ್ಷದ ಸದಸ್ಯನಿಗೆ ತಿಳಿಸಬೇಕು.

ಆ) ಶಿಸ್ತು ಕ್ರಮದ ವಿರುದ್ಧದ ಮೇಲ್ಮನವಿಯನ್ನು ಸಂಬಂಧಪಟ್ಟ ಪಕ್ಷದ ಸದಸ್ಯನು ಶಿಸ್ತುಕ್ರಮದ ಮಾಹಿತಿಯನ್ನು ಪಡೆದ ದಿನಾಂಕದಿಂದ 6 ತಿಂಗಳ ಒಳಗಾಗಿ ಸಲ್ಲಿಸಬೇಕು.

ನಿಬಂಧನೆ–19, ಪರಿಚ್ಛೇದ 13ರ ಅಡಿಯಲ್ಲಿ :

ವಿಶೇಷ ಸಂದರ್ಭಗಳಲ್ಲಿ ತುರ್ತಾಗಿ ಪಕ್ಷದಿಂದ ಹೊರಗೆ ಹಾಕಲು ಅವಕಾಶವಿರುವುದು ಅತ್ಯಂತ 'ಗುರುತರ'ವಾದ ಪಕ್ಷ ವಿರೋಧಿ ಚಟುವಟಿಕೆಗಳ ಪ್ರಕರಣಗಳಲ್ಲಿ ಮಾತ್ರ. ಇದರ ಅರ್ಥವೇನೆಂದರೆ; ಒಬ್ಬ ಸದಸ್ಯನು ಗುಪ್ತಚಾರನೆಂದು ಅಥವಾ ವೈರಿಯ ಏಜೆಂಟನೆಂದು ಕಂಡುಬಂದರೆ ಅಥವಾ ಆ ಸದಸ್ಯನ ಚಟುವಟಿಕೆಗಳು ಪಕ್ಷದ ನಿಲುವಿನ ಕುರಿತು ತೀವ್ರ ರಾಜಿ ಮಾಡಿಕೊಳ್ಳುವುದರಲ್ಲಿ ತೊಡಗಿರುವ ಅತ್ಯಂತ ಗಂಬೀರ ಸಂದರ್ಭಗಳಲ್ಲಿ.

ನಿಬಂಧನೆ–20ರ ಅಡಿಯಲ್ಲಿ :

## ಚುನಾಯಿತ ಸಂಸ್ಥೆಗಳಲ್ಲಿ ಪಕ್ಷದ ಸದಸ್ಯರು

## ನಿಯಮಗಳು :

1. ಸಿಪಿಐ(ಎಂ)ನ ಪ್ರತಿಯೊಬ್ಬ ಸಂಸತ್ ಸದಸ್ಯರು ಕೇಂದ್ರ ಸಮಿತಿ ನಿಗದಿ ಪಡಿಸಿದ ಲೆವಿ ಹಣವನ್ನು ಕೇಂದ್ರ ಸಮಿತಿಗೆ ಪಾವತಿಮಾಡಬೇಕು.

2. ಆ ಲೆವಿಯನ್ನು ಪಿ.ಬಿ. ನಿರ್ಧರಿಸಿದ ಶೇಕಡಾಂಶವನ್ನು ಆಯಾ ಸಂಸತ್ ಸದಸ್ಯರ ಸಂಬಂಧಿಸಿದ ರಾಜ್ಯ ಸಮಿತಿಗಳಿಗೆ ಪ್ರತಿ ತಿಂಗಳು ಪಾವತಿ ಮಾಡಬೇಕು.

(ವಿವರಣೆ : ಸಂವಿಧಾನದ ನಿಬಂಧನೆ–20, ಪರಿಚ್ಛೇದ 5ರಲ್ಲಿ ಹೀಗೆ ಹೇಳಲಾಗಿದೆ– 'ಕಮ್ಯೂನಿಸ್ಟ್ ಶಾಸಕರು ಮತ್ತು ಸ್ಥಳೀಯ ಸಂಸ್ಥೆಗಳ ಸದಸ್ಯರು ಪಡೆಯುವ ಸಂಬಳ ಮತ್ತು ಭತ್ಯೆಗಳು ಪಕ್ಷದ ಹಣ ಎಂದು ಪರಿಗಣಿಸಲಾಗುವುದು' ಹಿಂದೆ ಸಂಸತ್ ಸದಸ್ಯರಿಗೆ, ವಿಧಾನ ಸಭಾ ಸದಸ್ಯರಿಗೆ ವಿಶ್ರಾಂತಿ ವೇತನ ಇರಲಿಲ್ಲ. ಈಗ ಇದೆ. ಅದಕ್ಕಾಗಿ ಈ ಕೆಳಗಿನ ನಿಯಮ)

3. ಕಮ್ಯೂನಿಸ್ಟ್ ಶಾಸಕರ ಸ್ಥಳೀಯ ಸಂಸ್ಥೆಗಳ ಸದಸ್ಯರ ಸಂಬಳ ಮತ್ತು ಭತ್ಯೆಗಳಲ್ಲಿ ಅವರು ತೆಗೆದುಕೊಳ್ಳುವ ವಿಶ್ರಾಂತಿ ವೇತನ ಕೂಡ ಸೇರಿದೆ.

ನಿಬಂಧನೆ–22ರ ಅಡಿಯಲ್ಲಿ :

## ಪಕ್ಷದ ಮಹಾಧಿವೇಶನ ಮತ್ತು ಸಮ್ಮೇಳನಗಳ ಪೂರ್ವಸಿದ್ಧತಾ ಚರ್ಚೆಗಳು

ಪಕ್ಷದ ಸಮ್ಮೇಳನದ ವೇದಿಕೆಗಳನ್ನು ಹಿಂದಿನ ಸಮ್ಮೇಳನದ ನಂತರದ ಕೆಲಸ ವರದಿಯನ್ನು ಮತ್ತು ಹಿಂದಿನ ಸಮ್ಮೇಳನ/ಮಹಾಧಿವೇಶನದಲ್ಲಿ ನಿರ್ಧರಿಸಲಾದ ಧೋರಣೆಯ ಜಾರಿಯ ಕುರಿತಾದ ರಾಜಕೀಯ ಸಂಘಟನಾ ಪ್ರಶ್ನೆಗಳನ್ನು ಚರ್ಚಿಸಲು ಮತ್ತು ವಿಮರ್ಶಿಸಲು ಬಳಸಲಾಗುವುದು. ಸಂವಿಧಾನದಲ್ಲಿ ಹೇಳಿರುವ ನಿಯಮಗಳಿಗೆ ಅನುಗುಣವಾಗಿ ಮಹಾಧಿವೇಶನದ ಕರಡು ರಾಜಕೀಯ ನಿರ್ಣಯದ ಮೇಲೆ ಪ್ರತ್ಯೇಕ ಚರ್ಚೆಯನ್ನು ನಡೆಸಬೇಕು.

ನಿಬಂಧನೆ–23ರ ಅಡಿಯಲ್ಲಿ :

## ಸಾಮೂಹಿಕ ಸಂಘಟನೆಗಳಲ್ಲಿ ಕೆಲಸ ಮಾಡುತ್ತಿರುವ ಪಕ್ಷದ ಸದಸ್ಯರು

1. ವಿವಿಧ ಸಾಮೂಹಿಕ ಸಂಘಟನೆಗಳಲ್ಲಿ ಶ್ರಮಿಸುತ್ತಿರುವ ಪಕ್ಷದ ಸದಸ್ಯರು ಕೆಲಸ ಕಾರ್ಯಗಳಿಗೆ ಮಾರ್ಗದರ್ಶನ ನೀಡಲು, ಕೇಂದ್ರ, ರಾಜ್ಯ ಮತ್ತು ಜಿಲ್ಲಾ ಮಟ್ಟಗಳಲ್ಲಿ ಪಕ್ಷದ ಸಮಿತಿಗಳು ತಮ್ಮ ಸದಸ್ಯರನ್ನು ಒಳಗೊಂಡು ಮತ್ತು ಮಾರ್ಗದರ್ಶನ ನೀಡುವ ಸಾಮರ್ಥ್ಯ ಇರುವವರೆಂದು ಪರಿಗಣಿಸಲಾದ ಇತರ ಸದಸ್ಯರನ್ನು ಸೇರಿಸಿಕೊಂಡು ಉಪ ಸಮಿತಿಗಳನ್ನು ರಚಿಸಬಹುದು. ಉಪಸಮಿತಿಯ ಸದಸ್ಯರು ಆಯಾ ರಂಗದ ಸಮಸ್ಯೆಗಳ ಕುರಿತ ವಿಶೇಷ ಪರಿಣಿತಿ ಪಡೆಯಬೇಕು, ಪಕ್ಷ ಕಟ್ಟುವುದರ ತಪಾಸಣೆ ನಡೆಸಬೇಕು, ಪಕ್ಷದ ಘಟಕಗಳಲ್ಲಿ ಅಥವಾ ಫ್ರಾಕ್ಷನ್‌ಗಳಲ್ಲಿರುವ ಪಕ್ಷದ ಸದಸ್ಯರು ವಿವಿಧ ಸಾಮೂಹಿಕ ಸಂಘಟನೆಗಳಲ್ಲಿ ನಿರ್ವಹಿಸುತ್ತಿರುವ ಕಾರ್ಯಚಟುವಟಿಕೆಗಳಿಗೆ ಮಾರ್ಗದರ್ಶನ ನೀಡಿ ಅವುಗಳನ್ನು ಸಮನ್ವಯಗೊಳಿಸಬೇಕು ಮತ್ತು ಪಕ್ಷದ ಧೋರಣೆಯ ಪಾಲನೆಯಾಗುವಂತೆ ಹಾಗೂ ಜಾರಿಯಾಗುವಂತೆ ನೋಡಿಕೊಳ್ಳಬೇಕು.

2. ಒಂದು ಸಾಮೂಹಿಕ ಸಂಘಟನೆಯಲ್ಲಿ ಅಥವಾ ವಿವಿಧ ಮಟ್ಟಗಳ ಅದರ ಚುನಾಯಿತ ಅಂಗಗಳಲ್ಲಿ ಕೆಲಸ ಮಾಡುವ ಪಕ್ಷದ ಎಲ್ಲಾ ಸದಸ್ಯರು ಆಯಾ ಅಂಗದ 'ಫ್ರಾಕ್ಷನ್' (ಭಾಗ) ಎಂದು ಪರಿಗಣಿಸಲ್ಪಡುತ್ತಾರೆ. ಅವರು ಪಕ್ಷದ ಸಂಬಂಧಪಟ್ಟ ಸಮಿತಿಗಳ ಮಾರ್ಗದರ್ಶನ ಮತ್ತು ನಿರ್ಣಯಗಳ ಅಡಿಯಲ್ಲಿ ಕಾರ್ಯ ನಿರ್ವಹಿಸಬೇಕು.

3. ಯಾವುದೇ ಸಾಮೂಹಿಕ ಸಂಘಟನೆಯಲ್ಲಿ ವಿವಿಧ ಮಟ್ಟಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಪಕ್ಷದ ಸದಸ್ಯರು ಕೆಲಸ ಮಾಡುತ್ತಿದ್ದರೆ, ಫ್ರಾಕ್ಷನ್ ಸದಸ್ಯರೊಳಗಿನಿಂದಲೇ ಫ್ರಾಕ್ಷನ್ ಸಮಿತಿಗಳನ್ನು ಪಕ್ಷದ ಸಂಬಂಧಪಟ್ಟ ಸಮಿತಿಗಳು ರಚಿಸಬೇಕು. ಪಕ್ಷದ ಸಮಿತಿಯು ಅಗತ್ಯವೆಂದು ಪರಿಗಣಿಸಿದರೆ ಫ್ರಾಕ್ಷನ್ ಸಮಿತಿಗಳಲ್ಲಿ, ಪಕ್ಷದ ಸಮಿತಿಗಳ ಸದಸ್ಯರಲ್ಲದೆ, ಪಕ್ಷದ ಸಮಿತಿಗೆ ಅಗತ್ಯವೆಂದು ಕಾಣುವ ಮಟ್ಟದ ಪ್ರಬುದ್ಧತೆ ಇರುವ ಅಥವಾ ಸಾಮೂಹಿಕ ಸಂಘಟನೆಗಳಲ್ಲಿ ಅನುಭವ ಇರುವ ಇತರ ಸಂಗಾತಿಗಳನ್ನು ಸೇರಿಸಬಹುದು.

4. ಮೇಲ್ಕಾಣಿಸಿದಂತೆ ರಚಿಸಲ್ಪಟ್ಟ ಫ್ರಾಕ್ಷನ್ ಸಮಿತಿಯು, ಪಕ್ಷದ ಸಂಬಂಧಪಟ್ಟ ಸಮಿತಿಗಳ ತೀರ್ಮಾನಗಳನ್ನು ಆಯಾ ಸಾಮೂಹಿಕ ಸಂಘಟನೆಯ ಕಾರ್ಯಕಾರಿ ಸಮಿತಿ ಅಥವಾ ಮಹಾ ಮಂಡಳಿ (ಜನರಲ್ ಕೌನ್ಸಿಲ್) ಯಲ್ಲಿ ಜಾರಿಗೆ ತರಬೇಕು. ಈ ದಿಸೆಯಲ್ಲಿ ಆಯಾ ಸಾಮೂಹಿಕ ಸಂಘಟನೆಗಳ ಫ್ರಾಕ್ಷನ್ ಪಕ್ಷದ ಸಮಿತಿಗಳ ನಿರ್ಣಯಗಳನ್ನು ಜಾರಿಗೆ ತರುವಂತಾಗಲು ಫ್ರಾಕ್ಷನ್ ಸಮಿತಿ ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು.